IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮರಾಟಿನಾಯ್ಕರ **ಗೊಂದೋಳು ಪೂಜೆಯ ಪ್ರಕಾರ ಮತ್ತು ವಿಧಿ ವಿಧಾನಗಳು (ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಸಮುದಾಯವನ್ನು ಅನುಲಕ್ಷಿಸಿ)**

**Ramachandra**

ಗೊಂದೋಳು ಪೂಜೆಯು ದೇವತೆಯ ಅಥವಾ ಮಾತೃದೇವತೆಯ ಉಪಾಸನೆಯ ಒಂದು ಆಚರಣೆಯಾಗಿದೆ. ದೈವೀಕತೆಗೆ ಬದ್ಧವಾದ ವಿಶಿಷ್ಟ ಆರಾಧನೆ. ಧಾರ್ಮಿಕ, ಸಾಂಸ್ಕೃತಿಕ ಹಾಗೂ ಜಾನಪದೀಯ ಸಂಪ್ರದಾಯಗಳಲ್ಲೊಂದಾದ ಗೊಂದೋಳು ಪೂಜೆಯು ಸಾಮೂಹಿಕ ವಿಧಿಕ್ರಿಯೆ ಮತ್ತು ಆರಾಧನೆಯಾಗಿರುತ್ತದೆ. ಅದೊಂದು ವಿಶಿಷ್ಟವಾದ ಅರ್ಥಪೂರ್ಣವಾದ ಮೂಲದಿಂದ ತನ್ನ ಹುಟ್ಟನ್ನು ಪಡೆದುಕೊಂಡಿದೆ. ಇದು ಮರಾಟಿ ಕುಲಧರ್ಮ ಪಾಲನೆಯ ಸಂಪ್ರದಾಯವಾಗಿರುತ್ತದೆ. ಮಹಾರಾಷ್ಟ್ರ ತುಳಜಾ ಭವಾನಿಯ ಭಕ್ತರಾದವರು ತಮ್ಮ ಕಷ್ಟ ನಿವಾರಣೆಯ ಅಭಿಲಾಷೆಯ ಕುರುಹಾಗಿ ಹರಕೆಯ ರೂಪದಲ್ಲಿ ತಮ್ಮ ತಮ್ಮ ಮನೆಗಳಲ್ಲಿ ನಡೆಸುವ ಅಂಬಾ ಭವಾನಿಗೆ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಮಂಡಲಾಕಾರದ ಬಲಿ ಸಹಿತವಾದ ಒಂದು ಆರಾಧನೆಯಾಗಿರುತ್ತದೆ.

ಉಡುಪಿ ಜಿಲ್ಲೆಯ ಮರಾಟಿ ನಾಯ್ಕರು ಮಾತೃದೇವತೆ ಹಾಗೂ ಶಕ್ತಿದೇವತೆಯ ಪ್ರತೀಕವಾಗಿರುವ ಅಂಬಾಭವಾನಿಯನ್ನು ವಿವಿಧ ಹೆಸರುಗಳಲ್ಲಿ ಆರಾಧಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಅಂಬಾ, ಮಮ್ಮಾಯಿ, ದುರ್ಗಾಂಬ, ಅಂಬಾಭವಾನಿ, ಮಹಮ್ಮಾಯಿ, ತುಲಜಾಭವಾನಿ, ಸಿಂಹವಾಹಿನಿ, ದುರ್ಗಾಪರಮೇಶ್ವರಿ, ಶಾಂತಾದುರ್ಗೆ, ಅಮ್ನೋರು, ಮಹಿಷಮರ್ದಿನಿ, ದುರ್ಗಾದೇವಿ, ಲಕ್ಷ್ಮೀಅಂಬಾಭವಾನಿ ಮುಂತಾದ ಹೆಸರುಗಳಿಂದ ಆರಾಧಿಸುತ್ತಿದ್ದಾರೆ. ಅಲ್ಲದೆ ಉಡುಪಿ ಜಿಲ್ಲೆಯಾದ್ಯಂತ ಸುಮಾರು ನಲವತ್ತೆರಡು ಗದ್ದುಗೆ ದೇವಸ್ಥಾನಗಳಿವೆ. ಈ ಎಲ್ಲಾ ದೇವಸ್ಥಾನಗಳಲ್ಲಿ ಗೊಂದೋಳು ಪೂಜೆಯು ಪ್ರಮುಖ ಆಚರಣೆಗಳಲ್ಲಿ ಒಂದು. ಈ ಪೂಜೆಯನ್ನು ಅವರು ದೇವಿಪೂಜೆ, ದುರ್ಗಾಪೂಜೆ, ಅಮ್ನೋರುಪೂಜೆ, ಮಹಮ್ಮಾಯಿಪೂಜೆ, ಎಂಬೆಲ್ಲ ಹೆಸರುಗಳಿಂದ ಕರೆಯುತ್ತಾರೆ. ಅಲ್ಲದೆ ಕುಂದಾಪುರ ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಜಾತಿ ಮತ ಭೇದವಿಲ್ಲದೆ ಊರಿನ ಸಮಸ್ತ ಜನರು ಸೇರಿ ‘ಮಾರಿಗೊಂದೋಲು’ ಪೂಜೆಯನ್ನು ಆಚರಿಸುತ್ತಿರುವುದು ಕಂಡುಬಂದಿರುತ್ತದೆ. ಅಲ್ಲದೆ ಕುಂದಾಪುರ ತಾಲೂಕಿನ ಕೆಲವೊಂದು ಗ್ರಾಮಗಳಾಗಿರುವಬಸರೂರುಮುಂತಾದಪ್ರದೇಶಗಳಲ್ಲಿ ಅರವತ್ತುವರ್ಷಗಳಿಗೊಮ್ಮೆ ಆಚರಿಸುವ ಮಾರಿ ಪೂಜೆಯನ್ನು ಕೂಡಾ ಅನೇಕ ತಿಳುವಳಿಕೆದಾರರು ಮಾರಿ ಗೊಂದೋಲಿಗೆ ಸಮನಾಗಿರುವಂತದ್ದು ಎಂದು ತಿಳಿಸಿರುವರು.

## ಭೈರವ ಪೂಜಾಕ್ರಮ

ಮರಾಟಿಗರ ಆರಾಧ್ಯ ದೈವವಾದ ಅಂಬಾ ಭವಾನಿಯನ್ನು ಪೂಜಿಸುವ ಅಂದರೆ ಗೊಂದೋಳು ಪೂಜೆಯ ಮುಂಚಿತವಾಗಿ ದೇವಿಯ ಭಂಟನಾಗಿರುವ ಭೈರವನನ್ನು ಮೊದಲು ಅಸುರ ಕ್ರಿಯೆಯಿಂದ ಪೂಜಿಸುತ್ತಾರೆ. ಭೈರವನ ಪೂಜೆಗಾಗಿ ಬನದಲ್ಲಿ ಒಂದು ಕಲ್ಲನ್ನು ಸ್ಥಾಪಿಸುತ್ತಾರೆ. ಆ ಕಲ್ಲನ್ನು ಭೈರವನ ಕಲ್ಲು ಅಥವಾ ಭೂತದ ಕಲ್ಲು ಎಂದು ಕರೆಯುತ್ತಾರೆ. ಒಂದು ನಿರ್ದಿಷ್ಟವಾಗಿ ಗೊತ್ತುಪಡಿಸಿದ ದಿನದಂದು ಮನೆಯ ಯಜಮಾನ (ಭೈರವನನಿಗೆ ಕರ್ಪುನಾಯೆ) ಅಥವಾ ಪೂಜಾರಿ ಮಡಿಯಲ್ಲಿದ್ದು ಮಧ್ಯಾಹ್ನದ ಹೊತ್ತಿಗೆ ಭೈರವನ ಬನಕ್ಕೆ ಹೋಗಿ ಸ್ವಚ್ಛಗೊಳಿಸಿ ನಂತರ ಈಗಾಗಲೇ ಭೈರವನಿಗೆ ಈಡುಬಿಟ್ಟ ಕೋಳಿಗಳಿಗೆ ಅನ್ನ ಆಹಾರವನ್ನು ನೀಡಿ ತಾನು ಆಹಾರವನ್ನು ಸೇವಿಸುತ್ತಾನೆ. ಇದೇ ಸಂದರ್ಭದಲ್ಲಿ ಮನೆಯ ಅಥವಾ ಕುಟುಂಬದ ಗಂಡಸರಿಬ್ಬರು, ಭೈರವನ ಪೂಜೆಗೆ ಬೇಕಾಗಿರುವ ಎಲ್ಲಾ ಸಾಮಾಗ್ರಿಗಳನ್ನು ಒಟ್ಟಿಗೆ ಸೇರಿಸಿ ಒಂದು ಬುಟ್ಟಿಯಲ್ಲಿ ಸಂಗ್ರಹಿಸಿಡುತ್ತಾರೆ. ಅಲ್ಲದೆ ಗಂಡಸರು ಪೂಜೆಗೆ ಬೇಕಾದ ಅಡುಗೆಯನ್ನು ತಯಾರಿಸುತ್ತಾರೆ. ಅನ್ನ, ಮೀನು ಸಾರು, ಅಕ್ಕಿರೊಟ್ಟಿ, ತೊರಕೆ ಮೀನು ಮತ್ತು ಹುರುಳಿ ಇವುಗಳು ಭೈರವನ ಬನದಲ್ಲಿ ಭೈರವನಿಗೆ ಪ್ರಸಾದ ಮಾಡುವ (ಎಡೆ ಇಡುವ) ಆಹಾರಗಳು.

ಗೊಂದೋಳು ಪೂಜೆಯ ದಿನ ಸಾಯಂಕಾಲ ಸೂರ್ಯಾಸ್ತಮಾನ ಆದ ಬಳಿಕ ಕುಟುಂಬದ ಗಂಡಸರು ಮತ್ತು ಆಮಂತ್ರಿಕ ಅತಿಥಿಗಳಲ್ಲಿ ಗಂಡಸರು ಮತ್ತಿತರ ಭಕ್ತಾದಿಗಳು (ಸ್ತ್ರೀಯರನ್ನು ಹೊರತುಪಡಿಸಿ) ಭೈರವನ ಬನಕ್ಕೆ ಬರುತ್ತಾರೆ. ಈಗಾಗಲೇ ಸ್ಥಾಪಿತವಾದ ಕಲ್ಲಿನ ಮೇಲೆ ತಾವು ತಂದಿರುವ ಬೆಳ್ತಿಗೆ ಅಕ್ಕಿ ಮತ್ತು ತೆಂಗಿನಕಾಯಿಯನ್ನು ಇಟ್ಟು ಆರತಿ ಮಾಡಿ ಮೊದಲ ಪ್ರಾರ್ಥನೆ ಮಾಡುತ್ತಾರೆ. ನಂತರ ಕುಟುಂಬಸ್ಥರು ಹಾಗೂ ಭಕ್ತಾದಿಗಳು ಭಕ್ತಿ ಪೂರ್ವಕವಾಗಿ ತಂದಿರುವ ಅಗರಬತ್ತಿ, ತೆಂಗಿನಕಾಯಿ ಮತ್ತು ಶೇಂದಿ ಮತ್ತು ಮಧ್ಯವನ್ನು ದೈವಕ್ಕೆ ಸಮರ್ಪಿಸುತ್ತಾರೆ. ಈಗಾಗಲೇ ಸಿದ್ಧಪಡಿಸಿರುವ ಅಕ್ಕಿಯ ರೊಟ್ಟಿ, ಅನ್ನ, ಮೀನು ಪದಾರ್ಥ, ಮೀನು ಮತ್ತು ಹುರುಳಿ (ಕೆಲವು ಕಡೆಯಲ್ಲಿ ಬಲ್ಯಾರು ಮತ್ತು ಕಲ್ಲೆ) ಉಪಯೋಗಿಸುತ್ತಾರೆ. ಅವುಗಳನ್ನು ಕಲ್ಲಿನಲ್ಲಿಟ್ಟು ಪ್ರಾರ್ಥಿಸಿ ಈಡುಬಿಟ್ಟಿರುವ ಮತ್ತು ಹರಕೆಯ ರೂಪದಲ್ಲಿ ಅರ್ಪಿಸಲು ಉದ್ದೇಶಿಸಿರುವ ಕೋಳಿಗಳ ರಕ್ತ ತರ್ಪಣ ನೀಡಲಾಗುತ್ತದೆ. ನಂತರ ಎರಡನೆಯ ಪೂಜೆ ಮತ್ತು ಪ್ರಾರ್ಥನೆಯನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಒಂದು ಕ್ಷಣ ಎಲ್ಲರೂ ಮೌನವಾಗಿ ಬೇರೆ ಕಡೆ ತಮ್ಮ ಲಕ್ಷ್ಯವನ್ನು ಹರಿಸುವಂತೆ ಮಾಡುತ್ತಾರೆ. ಉದಾಹರಣೆ (ಅಗೋ ಅಗೋ ನೋಡಲ್ಲಿ ಆನೆಯನ್ನು ಇರುವೆ ಕೊಂಡು ಹೋಗುತ್ತಿರುವುದು) ಅಂತಿಮವಾಗಿ ಭೈರವನ ಪ್ರಸಾದ ರೂಪದಲ್ಲಿ ತೆಂಗಿನಕಾಯಿಯನ್ನು ಒಡೆದು ಬಂದಂತಹ ಭಕ್ತರಿಗೆ ಭೈರವನ ಪ್ರಸಾದ ರೂಪದಲ್ಲಿ ಹಂಚುತ್ತಾರೆ. ಕೊನೆಯದಾಗಿ ಬನದ ಒಂದು ಮೂಲೆಯಲ್ಲಿ ಅಥವಾ ಹೊರಗೆ ತಂದಿರುವ ಹಾಗೂ ಸಮರ್ಪಿಸಿರುವ ಸಾರಾಯಿ, ಬೇಯಿಸಿದ ಮೀನು, ಕೋಳಿ ಮಾಂಸದಿಂದ ಕೂಡಿದ ಲಘುವಾದ ಭೋಜನ ಮಾಡುವುದರೊಂದಿಗೆ ಭೈರವನ ಪೂಜೆ ಮುಕ್ತಾಯವಾಗುತ್ತದೆ. ಹರಕೆಯ ಹೆಸರಿನಲ್ಲಿ ಭಕ್ತಾದಿಗಳು ತಂದಿರುವ ಹಾಗೂ ಬಲಿಕೊಟ್ಟು ಕೋಳಿಯನ್ನು ಅವರವರ ಮನೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂಬುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

## ಇತರ ಸಮುದಾಯಗಳಲ್ಲಿ ಗೊಂದೋಳು ಪೂಜೆ

"ಕರಾವಳಿ ಜಿಲ್ಲೆಯಲ್ಲಿ ಮರಾಟಿಗರಲ್ಲದ ಇತರ ಸಮುದಾಯದವರು ಮಮ್ಮಾಯಿಯನ್ನು ಬೇರೆಬೇರೆ ನಾಮಗಳಿಂದ ಕರೆದು ಗೊಂದೋಳುಪೂಜೆ ಆಚರಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಮಹಾರಾಷ್ಟ್ರ ಮೂಲದಿಂದ ಬಂದಿರುವ **ಕರಾಡ್ಡ ಬ್ರಾಹ್ಮಣರು** ಕೊಲ್ಹಾಪುರದ ಮಹಾಲಕ್ಷ್ಮೀಯ ಆರಾಧಕರಾಗಿದ್ದು, 'ಗೊಂದಲ್' ಎಂಬಮೂರ್ತಿಯಸುತ್ತ ಗೊಂದಳ ಆಚರಿಸುವರು. ಇವರು ತುಳುಜಾಪುರದಭವಾನಿಪೂಜೆ ಅಥವಾಸಂತೋಷಿಮಾ ಪೂಜೆ ಎಂಬುದಾಗಿ ಕರೆದು ಇಲ್ಲಿಯ ಕ್ರಿಯಾಚರಣೆಯನ್ನು ಗೊಂದೋಲು ಎಂದು ಕರೆಯುವರು".

**"ಪರಿವಾರಬಂಟರು** ಮಹಮ್ಮಾಯಿಯ ಆರಾಧಕರು ಹಾಗೂ ಅಂಬಾಭವಾನಿಯ ಉಪಾಸಕರು. ಇವರು ಮಹಾನವಮಿಯ ಸಂದರ್ಭದಲ್ಲಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ, ಕಷ್ಟ ನಷ್ಟ ಪರಿಹಾರಕ್ಕಾಗಿ ಹರಕೆಯ ರೂಪದಲ್ಲಿ ತಮಗೆ ಅನುಕೂಲವಾದ ಹಾಗೂ ಶುಭದಿನದಂದು ಈ ಗೊಂದೋಲು ಸೇವೆಯನ್ನು ಆಚರಿಸುವರು. ಇವರು ನೇರವಾಗಿ ಈ ಆಚರಣೆಯನ್ನು ಮಾಡದಿದ್ದರೂ ಕರಾವಳಿ ಪ್ರದೇಶದಲ್ಲಿ ವಾಸ್ತವವಿರುವ ಮರಾಟಿ ನಾಯ್ಕರನ್ನು ಕರೆದು ಅವರಿಂದ ಅಂಬಾ ಭವಾನಿಗೆ ಗೊಂದೋಲು ಪೂಜೆ ನಡೆಸುವರು".

"ಕರಾವಳಿ ಕರ್ನಾಟಕದ **ರಾಮಕ್ಷತ್ರಿಯ ಸಮುದಾಯದವರು** ತಾವು ಆರಾಧಿಸುತ್ತಿರುವ ಆದಿಶಕ್ತಿ ದುರ್ಗಾಪರಮೇಶ್ವರಿಗೆ (ಇದೀಗ ಪರಿವರ್ತನೆಗೊಂಡ ಹೆಸರು) ಪೂರ್ವ ಕಾಲದಲ್ಲಿ ವಿಶೇಷ ಪೂಜೆಯಾಗಿ ಗೊಂದೋಲು ಕ್ರಿಯಾಚರಣೆಯನ್ನು ನಡೆಸುವುದನ್ನು ತಿಳುವಳಿಕೆದಾರರು ತಿಳಿಸಿರುತ್ತಾರೆ". "ದಕ್ಷಿಣ ಕನ್ನಡ ಜಿಲ್ಲೆಯ **ಪದ್ಮಶಾಲಿ (ಶೆಟ್ಟಿಗಾರ್)** ಯವರು ಆರಾಧ್ಯ ದೇವರು ಮಾರಿಯಮ್ಮ ಅಥವಾ ಮಹಮ್ಮಾಯಿಯಾಗಿದ್ದು, ಇವರು ವಾಸವಾಗಿರುವ ಮುಲ್ಕಿ, ಪಣಂಬೂರು, ಸುರತ್ಕಲ್, ಸಿದ್ಧಕಟ್ಟೆ, ಉಳ್ಳಾಲ ಪ್ರದೇಶಗಳಲ್ಲಿ ಇವರು ನಡೆಸುವ ಮಾರಿ ಪೂಜೆ ಸಂದರ್ಭದಲ್ಲಿ ರಾಣಿಯವರು, ಮಾದಿಗರು, ಅದೇ ರೀತಿ ಮರಾಟಿ ನಾಯ್ಕ ಸಮುದಾಯದವರನ್ನು ಅಮಂತ್ರಿಸಿ ಗೊಂದೋಲು ಆಚರಣೆಯನ್ನು ನಡೆಸಿಕೊಡುವಲ್ಲಿ ಈ ಹಿಂದೆ ಮಾರಿಪೂಜೆಯ ಪೂರ್ವದಲ್ಲಿ ಅಮ್ನೋರಿಗೆ ಸೇವೆ ಸಲ್ಲಿಸುತ್ತಿದ್ದರು ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು".

ಅಲ್ಲದೆ "ಮಹಾರಾಷ್ಟ್ರದಿಂದ ಕರಾವಳಿ ಪ್ರದೇಶಕ್ಕೆ ವಲಸೆ ಬಂದಿರುವ ಅನೇಕ ಸಮುದಾಯಗಳಲ್ಲಿ ಈ ಆಚರಣೆಯು ನಡೆಯುವುದನ್ನು ಗಮನಿಸಬಹುದು. ಶತಮಾನಗಳ ಹಿಂದೆ ಮಹಾರಾಷ್ಟ್ರ, ಗೋವಾ, ಉತ್ತರ ಕರ್ನಾಟಕ ಜಿಲ್ಲೆಗಳ ಮೂಲಕ ಕರಾವಳಿ ಪ್ರದೇಶಕ್ಕೆ ವಲಸೆ ಬಂದಿರುವ ಗೌಡ ಸಾರಸ್ವತ ಬ್ರಾಹ್ಮಣರು," ಬಾಲಾ-ವಾಳಿಕರ್, ರಾಜಪುರ ಬ್ರಾಹ್ಮಣರು, ಸಾರಸ್ವತ ಬ್ರಾಹ್ಮಣರು, ಕುಡಾಲ ದೇಶಸ್ಥಾರು, ಚಪ್ಟೆಕರ್, ಚಿತ್ಪಾವನ ಬ್ರಾಹ್ಮಣರು, ಪೆಡ್ನೆಕರ್, ಕುಡುಬಿಯರು, ಮರಾಟಿಕ್ಷತ್ರಿಯರು ಮುಂತಾದ ಸಮುದಾಯಗಳಲ್ಲಿ ಇಂದಿಗೂ ಗೊಂದೋಲು ಪೂಜೆ ಮತ್ತು ಅದಕ್ಕೆ ಸಂಬಂಧಿತ ರೂಪಾಂತರಗೊಂಡ ಮಹಮ್ಮಾಯಿ ಪೂಜೆ ನಡೆಯುತ್ತಿದೆ ಎಂಬುದಾಗಿ ಆಯಾ ಸಮುದಾಯಕ್ಕೆ ಸಂಬಂಧಪಟ್ಟ ತಿಳುವಳಿಕೆದಾರರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿಸಿರುತ್ತಾರೆ. ಈ ಎಲ್ಲಾ ಸಮುದಾಯದ ಹೆಚ್ಚಿನವರು ಮೂಲ ಮಹಾರಾಷ್ಟ್ರ ಸುತ್ತಮುತ್ತಲಿನ ಪ್ರದೇಶವಾಗಿರುವಂತಹ ಕೊಲ್ಹಾಪುರ, ರತ್ನಗಿರಿ, ಸೋಲಾಪುರ, ಕರಾಡ, ಪೂನಾ, ಸಾಂಗ್ಲಿ ಈ ಭಾಗ ಆಗಿರಬಹುದೆಂದು ಇನ್ನೂ ಹೆಚ್ಚಿನ ಸಂಶೋಧನೆಗಳಾದಾಗ ತಿಳಿದು ಬರಬಹುದು".

"ಗೋವಾದಿಂದ ವಲಸೆ ಬಂದಿರುವ ಕ್ರೈಸ್ತ ಸಮುದಾಯದ ಹಳೆಯ ತಲೆಮಾರಿನ ಕೆಲವರು ಈ ಪೂಜೆಯ ಅಭಿಮಾನಿಗಳಾಗಿರುವುದಾಗಿ ತಿಳಿದುಬಂದಿರುತ್ತದೆ. ಕಾಸರಗೋಡು ಸಮೀಪದ ಹಳ್ಳಿಯೊಂದರಲ್ಲಿ ನೆಲೆಸಿದ ಕ್ರೈಸ್ತ ಕುಟುಂಬವೊಂದು ಗೊಂದೋಲ ಪೂಜೆಯನ್ನು ಮಾಡಿಸುತ್ತಿದ್ದುದಲ್ಲದೆ ಈ ಪೂಜೆಗೆ ಸಂಬಂಧಪಟ್ಟಿರುವ ಪದ್ಯಗಳನ್ನು ಹಾಡುತ್ತಾ ಗುಮ್ಮಟವನ್ನು ಬಾರಿಸುತ್ತಿರುವುದು ತಿಳಿದು ಬಂದಿರುವುದಾಗಿ ಕೈಂತಜೆ ನರಸಿಂಹ ಭಟ್ ಅವರ ಲೇಖನ 'ಗೊಂದೋಲು' ಎಂಬುದರಲ್ಲಿ ತಿಳಿಸಿದ್ದಾರೆ". ಮಾತೃದೇವತೆಯ ಪರಿಕಲ್ಪನೆ, ಆರಾಧನೆಯ ಪ್ರಾಚೀನತೆ ಮತ್ತು ಗೊಂದೋಳು ಪೂಜೆಯ ಎಲ್ಲಾ ಪ್ರಕ್ರಿಯೆಯನ್ನು ಚರ್ಚಿಸುವುದರ ಮುಂಚಿತವಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವಲೋಕಿಸಿರುವ ಹಾಗೂ ಮರಾಟಿಗರು ಆರಾಧಿಸಿಕೊಂಡು ಬಂದಿರುವ ದೇವತೆಗಳ ಆರಾಧನಾ ಸ್ಥಳಗಳನ್ನು ಅಥವಾ ಶ್ರದ್ಧಾ ಕೇಂದ್ರಗಳನ್ನು ಗುರುತಿಸಿ ಪಟ್ಟಿ ಮಾಡಲಾಗಿದೆ ಅವುಗಳು ಈ ಕೆಳಗಿನಂತಿವೆ.

ಮರಾಟಿನಾಯ್ಕರು ಮುಖ್ಯವಾಗಿ ಶಕ್ತಿ ದೇವತೆ ಹಾಗೂ ಮಾತೃದೇವತೆಯ ಪ್ರತೀಕವಾಗಿರುವ ಮಹಾಮ್ಮಾಯಿ ದೇವತೆಯನ್ನು ವಿವಿಧ ನಾಮಗಳಿಂದ ಆರಾಧಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡು ಬಂದಿರುತ್ತದೆ. ಮಮ್ಮಾಯಿ, ಅಂಬಾ, ಅಂಬಾಭವಾನಿ, ದುರ್ಗಾಂಬಾ, ಸಿಂಹವಾಹಿನಿ, ದುರ್ಗಾಪರಮೇಶ್ವರಿ, ಮಹಾಮ್ಮಾಯಿ, ತುಳಜಾಭವಾನಿ, ಶಾಂತಾದುರ್ಗೆ, ಗದ್ದುಗೆ ಅಮ್ಮ, ಅಮ್ನಾರು, ಮಹಿಷಾಮರ್ದಿನಿ, ದುರ್ಗಾದೇವಿ, ಲಕ್ಷ್ಮೀ ಅಂಬಾ ಭವಾನಿ, ಸಿಂಹವಾಹಿನಿದುರ್ಗಾಪರಮೇಶ್ವರಿ, ವ್ಯಾಘ್ರಚಾಮುಂಡಿ ಮುಂತಾದ ಹೆಸರುಗಳಿಗೆ ಶಕ್ತಿದೇವತೆ ಅಥವಾ ಮಾತೃ ದೇವತಾರಾಧನೆ ಮಾಡುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಮರಾಟಿನಾಯ್ಕ ಸಮುದಾಯದವರಲ್ಲಿ ಒಟ್ಟು ೮೨ ಗದ್ದುಗೆ ದೇವಸ್ಥಾನಗಳಿವೆ. ಮರಾಟಿ ನಾಯ್ಕ ಸಮುದಾಯದವರು ವಾಸವಿರುವ ಪ್ರದೇಶದಿಂದ ಪ್ರದೇಶಕ್ಕೆ ದೇವತೆಯ ಹೆಸರುಗಳು ಬೇರೆ ಬೇರೆಯಾಗಿರುತ್ತದೆ. ಅವುಗಳ ಸಮೀಕ್ಷೆ ಮಾಡಿ ಈ ಕೆಳಗಿನಂತೆ ನೀಡಿರುವೆನು.

**ಉಡುಪಿ ಜಿಲ್ಲೆಯಲ್ಲಿ ಮರಾಟಿ ನಾಯ್ಕ ಸಮುದಾಯದವರ ಗದ್ದುಗೆ ದೇವಸ್ಥಾನಗಳು (ಶಕ್ತಿ ಆರಾಧನೆಯ ಶ್ರದ್ಧಾ ಕೇಂದ್ರಗಳು)**

**ಉಡುಪಿ ತಾಲೂಕು:**

೧. ಶ್ರೀ ಮಹಿಷಮರ್ದಿನಿ ಗದ್ದುಗೆ ಅಮ್ಮನವರ ದೇವಸ್ಥಾನ, ಇಂದ್ರಾಳಿ, ಉಡುಪಿ
೨. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು, ಬೈರವ ಬೈರವಿ ದೇವಸ್ಥಾನ, ಮೂಡುಸಗ್ರಿ, ಉಡುಪಿ
೩. ಶ್ರೀ ಮೂಲ ಗದ್ದುಗೆ ಅಮ್ಮನವರ ದೇವಸ್ಥಾನ, ಸಗ್ರಿ, ಉಡುಪಿ
೪. ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಗದ್ದುಗೆ ದೇವಸ್ಥಾನ ಜಡ್ಡು, ದೇವಿ ನಗರ, ಪರ್ಕಳ, ಉಡುಪಿ
೫. ಶ್ರೀ ದುರ್ಗಾದೇವಿ ದೇವಸ್ಥಾನ ಗದ್ದುಗೆ, ಕಂಚಿನ ಬೈಲು, ಉಡುಪಿ
೬. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬೊಮ್ಮಾರಬೆಟ್ಟು, ಹಿರಿಯಡಕ, ಉಡುಪಿ
೭. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ದೇವರಗುಂಡ, ಹಿರಿಯಡಕ, ಉಡುಪಿ
೮. ಶ್ರೀ ದುರ್ಗಾ ಅಂಭಾಭವಾನಿ ದೇವಸ್ಥಾನ, ಕುದಿ ಕೊಂಡಾಡಿ, ಉಡುಪಿ
೯. ಶ್ರೀ ದುರ್ಗಾಂಬಾ ಭವಾನಿ ದೇವಸ್ಥಾನ, ಆತ್ರಾಡಿ, ಉಡುಪಿ
೧೦. ಶ್ರೀ ಅಂಬಾ ಭವಾನಿ ದೇವಸ್ಥಾನ, ಕೆಳಕಬ್ಯಾಡಿ, ಪರ್ಕಳ, ಉಡುಪಿ
೧೧. ಶ್ರೀ ಸಿಂಹವಾಹಿನಿ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಶ್ರೀಕ್ಷೇತ್ರ ಗಂಪ,ಹಿರಿಯಡಕ
೧೨. ಶ್ರೀ ಮಹಿಷಮರ್ದಿನಿ ಗದ್ದುಗೆ ಅಮ್ಮನವರ ದೇವಸ್ಥಾನ, ಪಡುಬೆಟ್ಟು, ಚಾಂತಾರು, ಬ್ರಹ್ಮಾವರ
೧೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಮೂಡುಬೆಟ್ಟು, ಚಾಂತಾರು, ಬ್ರಹ್ಮಾವರ
೧೪. ಶ್ರೀ ದುರ್ಗಾಪರಮೇಶ್ವರಿ ಜೋಡು ಗದ್ದಿಗೆ ಅಮ್ಮನವರ ದೇವಸ್ಥಾನ, ಚೇರ್ಕಾಡಿ, ಬ್ರಹ್ಮಾವರ
೧೫. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಆಲುಂಜೆ, ಆರೂರು, ಬ್ರಹ್ಮಾವರ
೧೬. ಶ್ರೀ ದುರ್ಗಾಪರಮೇಶ್ವರಿ ಜೋಡು ಗದ್ದುಗೆ ಅಮ್ಮನವರ ದೇವಸ್ಥಾನ, ನೂಜಿ, ಹಲುವಳ್ಳಿ, ಬ್ರಹ್ಮಾವರ
೧೭. ಗದ್ದುಗೆ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನ, ತುರುಕರುಬೆಟ್ಟು, ಕರ್ಜೆ, ಬ್ರಹ್ಮಾವರ
೧೮. ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನ, ಜೋಡುಗದ್ದಿಗೆ, ತಡಾಲು ಕರ್ಜೆ, ಬ್ರಹ್ಮಾವರ
೧೯. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, "ವಿಜಯವನ", ಅಮುಜಿ, ಕೆಂಜೂರು, ಬ್ರಹ್ಮಾವರ
೨೦. ಶ್ರೀ ಮಹಾಮ್ಮಾಯಿ ಗದ್ದುಗೆ ಅಮ್ಮನವರ ದೇವಸ್ಥಾನ, ಕುಂಜದ ಕಟ್ಟೆ, ಪೆರ್ಡೂರು
೨೧. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಕುಕ್ಕೆಹಳ್ಳಿ
೨೨. ಶ್ರೀ ದುರ್ಗಾಂಬಾ ಗದ್ದುಗೆ ಅಮ್ಮನವರ ದೇವಸ್ಥಾನ, ಕೂಡ್ಲಿ, ಬಾರಕೂರು
೨೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಮಾರಿಯಮ್ಮ ದೇವಸ್ಥಾನ, ಮಸ್ಕಿಬೈಲು, ಬಾರಕೂರು

**ಕಾರ್ಕಳ ಜಿಲ್ಲೆ:**

೧. ಶ್ರೀ ಗದ್ದುಗೆ ಅಮ್ಮನವರ ದೇವಾಲಯ, ಬ್ಯಾಣ, ಶಿವಪುರ, ಹೆಬ್ರಿ
೨. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು, ಕುಬ್ರಿ, ಶಿವಪುರ, ಹೆಬ್ರಿ
೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು ಬಚ್ಚಪ್ಪು, ಹೆಬ್ರಿ
೪. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು ಹೊಸ ಮದಗ, ಮಂಡಾಡಿಜಡ್ಡು, ಚಾರ ಹೆಬ್ರಿ
೫. ಶ್ರೀ ಲಕ್ಷ್ಮೀ ಅಂಬಾ ಭವಾನಿ ದೇವಸ್ಥಾನ, ದುರ್ಗಾ ಕಾರ್ಕಳ
೬. ಶ್ರೀ ಮಹಾಮ್ಮಾಯಿ ಗದ್ದುಗೆ, ಕುಕ್ಕುಜೆ ದೊಂಡರಂಗಡಿ, ಕಾರ್ಕಳ
೭. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಕೈರಬೆಟ್ಟು, ಕಾರ್ಕಳ
೮. ಶ್ರೀ ಗದ್ದುಗೆ ಅಮ್ಮನವರ ದೇವಸ್ಥಾನ, ಮುನಿಯಾಲು, ಕಾರ್ಕಳ
೯. ಶ್ರೀ ಕ್ಷೇತ್ರ ಮಾಣಿಬೆಟ್ಟು, ಶ್ರೀ ಮಹಾಮ್ಮಾಯಿ ದೇವಸ್ಥಾನ, ಶಿರ್ಲಾಲು, ಕಾರ್ಕಳ
೧೦. ಶ್ರೀ ದುರ್ಗಾದೇವಿ ದೇವಸ್ಥಾನ, ಪಾಲುಮನೆ, ಸೂಡಾ, ಕಾರ್ಕಳ
೧೧. ಶ್ರೀ ಮಹಾಮ್ಮಾಯಿ ಗದ್ದುಗೆ ಪಾಲ್‌ಬೆಟ್ಟು, ಎಳ್ಳಾರೆ, ಕಾರ್ಕಳ
೧೨. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮ ಚೆನ್ನಿಬೆಟ್ಟು, ಕಡ್ತಲ, ಕಾರ್ಕಳ
೧೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು ಕುಕ್ಕುಜೆ ಹೊಸಮನೆ, ದೊಂಡರಂಗಡಿ, ಕಾರ್ಕಳ

**ಕುಂದಾಪುರ ತಾಲೂಕು**

೧. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ, ೩೧ನೇ ಶಿರೂರು ಕೊಡಸರ ಬೆಟ್ಟು
೨. ಶ್ರೀ ಗದ್ದುಗೆ ಅಮ್ಮನವರ ದೇವಸ್ಥಾನ, ಗೋರ್ಕೋಡು ರಟ್ಟಾಡಿ, ಕುಂದಾಪುರ
೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಭಂಡೀಮರದ ಕಟ್ಟೆ, ರಟ್ಟಾಡಿ, ಕುಂದಾಪುರ
೪. ಶ್ರೀ ನವದುರ್ಗಿ ಗದ್ದುಗೆ ಅಮ್ಮನವರು, ಕೊಂತಾಳಿ, ಜೆಡ್ಡಿನಗದ್ದೆ, ಅಮಾಸೆಬೈಲು, ಕುಂದಾಪುರ
೫. ಶ್ರೀ ಅಂಬಾ ಭವಾನಿ ಗದ್ದುಗೆ ಅಮ್ಮನವರ ದೇವಸ್ಥಾನ, ಮರೂರು, ಬೆಳ್ವೆ, ಕುಂದಾಪುರ
೬. ಶ್ರೀ ಗದ್ದುಗೆ ಅಮ್ಮನವರ ದೇವಸ್ಥಾನ, ಸೋಣೆ, ಸಿದ್ಧಾಪುರ, ಕುಂದಾಪುರ

**ಗೊಂದೋಳು ಪೂಜೆಯ ಪ್ರಕಾರಗಳು ಮತ್ತು ವಿಧಿ ವಿಧಾನಗಳು**

ಮರಾಟಿ ನಾಯ್ಕರ ಆರಾಧ್ಯ ದೇವತೆ ಮಹಮ್ಮಾಯಿ ಇವರು ಕಷ್ಟಕಾಲದಲ್ಲಿ ಬೇರೆ ಯಾರಿಂದಲೂ ಯಾವುದರಿಂದಲೂ ಸಾಧ್ಯವಿಲ್ಲ ಎಂದಾಗ ಆದಿಶಕ್ತಿ ಮಹಮ್ಮಾಯಿಯನ್ನು ಪ್ರಾರ್ಥಿಸಿ ತಮ್ಮ ಕುಟುಂಬಕ್ಕೆ ಬಂದ ಸಮಸ್ಯೆಯನ್ನು ಬಗೆಹರಿಸಿ ತಮಗೆ ನೆಮ್ಮದಿಯ ಜೀವನವನ್ನೂ ಕರುಣಿಸಿದಲ್ಲಿ ದೇವಿಗೆ ಅಂಗಾರೆ ಪೂಜೆಯೋ ಅಥವಾ ಶುಕ್ರವಾರ ಪೂಜೆಯೋ ಗೊಂದೋಲು ಪೂಜೆಯನ್ನು ಮಾಡುತ್ತೇನೆಂದೂ ನೆನಪಿಸಿ ಹರಕೆಯ ರೂಪದಲ್ಲಿ ಒಂದು ಕುಡ್ತೆ ತೆಂಗಿನೆಣ್ಣೆಯನ್ನು ಅಥವಾ ಐದು ಕಾಲು ಅಥವಾ ನೂರ ಒಂದು ರೂಪಾಯಿಯನ್ನು ಈಡು ಕಟ್ಟಿಡುತ್ತಾರೆ. ಶ್ರದ್ಧಾ ಭಕ್ತಿಯಿಂದ ನಂಬಿದರೆ ದೇವಿ ನಮ್ಮ ಕಷ್ಟವನ್ನೂ ನೂರಕ್ಕೆ ನೂರು ಪರಿಹರಿಸುತ್ತಾಳೆ ಎಂಬ ಬಲವಾದ ನಂಬಿಕೆ ಇವರಲ್ಲಿದೆ. ಮರಾಟಿಗರು ಹರಕೆ ಹೊತ್ತು ಪೂಜೆ ಮಾಡುವುದರ ಜೊತೆಗೆ ಭಕ್ತಿಯಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ಎರಡು ಅಥವಾ ನಾಲ್ಕು ವರ್ಷಕ್ಕೆ 'ಒಂದು ಅಂಗಾರೆಪೂಜೆ'ಯನ್ನು ಅಥವಾ ಗೊಂದೋಲು ಪೂಜೆಯನ್ನು ಮಾಡಿ ಅನೇಕ ಕುಟುಂಬಗಳು ಉನ್ನತಿಯನ್ನು ಕಂಡಿರುತ್ತಾರೆ ಎಂಬುದಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಹಿತಿದಾರರು ಹಾಗೂ ಭಕ್ತಾದಿಗಳು ತಿಳಿಸಿರುತ್ತಾರೆ. ಮರಾಟಿ ನಾಯ್ಕರು ಗೊಂದೋಲು ಪೂಜೆಯನ್ನು ಮೂರು ವಿಧಗಳಾಗಿ ಮಾಡುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

(ಅ) ಅತ್ಯಂತ ಸಣ್ಣ ರೀತಿಯಲ್ಲಿ ಕಡಿಮೆ ಖರ್ಚಿನಲ್ಲಿ ಮನೆಯ ಒಳಗಡೆಯೇ ಪೂಜಾ ಕೋಣೆಗೆ ಸೀಮಿತಗೊಂಡಂತೆ ಅಂಗಾರೆ ಪೂಜೆಯನ್ನು ಕುಟುಂಬಸ್ಥರನ್ನು ಮತ್ತು ಇಷ್ಟಮಿತ್ರ ಬಂಧುಗಳನ್ನು ಸ್ವಲ್ಪ ಪ್ರಮಾಣದಲ್ಲಿ ಜನರನ್ನು ಸೇರಿಸಿ ಅದಕ್ಕೆ ತಕ್ಕಂತೆ ಪೂಜೆ ಮಾಡುತ್ತಾರೆ. ಇದಕ್ಕೆ ಒಂದು ಗಂಡು ಕೋಳಿ ಮತ್ತು ಹೆಣ್ಣು ಕೋಳಿಯನ್ನು ಮಾತ್ರ ಉಪಯೋಗಿಸುತ್ತಾರೆ.

(ಆ) ಇನ್ನೊಂದು ವಿಧಾನ ಸ್ವಲ್ಪ ದೊಡ್ಡ ಮಟ್ಟದಲ್ಲಿ ಗೊಂದೋಲು ಪೂಜೆ ಆಚರಿಸುವುದು ಕಂಡು ಬಂದಿರುತ್ತದೆ. ಇದಕ್ಕೆ ನಾಲ್ಕು ಕೋಳಿಯನ್ನು ಉಪಯೋಗಿಸುತ್ತಾರೆ. ಇದರಲ್ಲಿ ಗೊಂದೋಲು ಕುಣಿತ ಅಂಗಳದಲ್ಲಿ ನಡೆಸುವವರು. ಇದನ್ನು ಇವರು ಕೋಳಿ ಗೊಂದೋಲು ಪೂಜೆ ಎಂದು ಕರೆಯುತ್ತಾರೆ.

(ಇ) ಮೂರನೇಯದಾಗಿ ಗೊಂದೋಲು ಪೂಜೆಯನ್ನು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಮಾಡುವುದು ಕಂಡು ಬಂದಿರುತ್ತದೆ. ಇದಕ್ಕೆ ಎರಡು ಹಂದಿ (ಒಂದು ಹಂದಿಯಲ್ಲೂ ಕೂಡ ಮಾಡುತ್ತಾರೆ) ಮತ್ತು ನಾಲ್ಕು ಕೋಳಿಗಳನ್ನು ಉಪಯೋಗಿಸುವರು. ಕೆಲವರು ವಾದ್ಯ, ಬ್ಯಾಂಡು, ಕೊಂಬು ವಾಲಗವನ್ನು ಉಪಯೋಗಿಸಿ ಮಾಡುವುದುಂಟು. ಇದಕ್ಕೆ ಅತೀ ಹೆಚ್ಚಿನ ಜನರನ್ನು

ಆಮಂತ್ರಿಸುತ್ತಾರೆ. ಕೆಲವು ಕಡೆಯಲ್ಲಿ ಊರಿನ ಜನರನ್ನು ಕೂಡ ಸೇರಿಸಿ ಆಚರಿಸುತ್ತಾರೆ. ಈ ಮಾಹಿತಿಯನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ನೀಡಿರುತ್ತಾರೆ.

**೧. ವೀಳ್ಯ ಕೊಡುವುದು ಮತ್ತು ಬಾಳೆಗೊನೆ ಕಡಿಯುವ ವಿಧಿ:**

ಸಾಮಾನ್ಯವಾಗಿ ಮಾತೃದೇವತಾರಾಧನೆಗಳು ಮಂಗಳವಾರ ಅಥವಾ ಶುಕ್ರವಾರ ಹೆಚ್ಚಾಗಿ ಪೂಜೆ ನಡೆಯುವುದು ಕರಾವಳಿ ಕರ್ನಾಟಕದಲ್ಲಿ ಕಂಡುಬಂದಿರುತ್ತದೆ. ಮರಾಟಿಗರು ಆಚರಿಸುತ್ತಿರುವ ಗೊಂದೋಲು ಪೂಜೆಯು ಕೂಡಾ ಮಂಗಳವಾರ ಅಥವಾ ಶುಕ್ರವಾರ ನಡೆಯುತ್ತದೆ. ಜನರ ನಂಬಿಕೆಯಂತೆ ಈ ಎರಡೂ ದಿನಗಳೂ ಕೂಡಾ ಕಡುದಿನಗಳು ಆಗಿರುತ್ತದೆ. ಮನೆಯ ಯಜಮಾನ, ಗೊಂದೋಲು ಪೂಜೆಯ ಪ್ರಧಾನ ಪೂಜಾರಿ, ದರ್ಶನ ಪಾತ್ರಿ ಒಂದು ನಿಗದಿತ ದಿನವನ್ನು ನಿರ್ಧರಿಸಿ ಸಂಪ್ರದಾಯದಂತೆ ಗೊಂದೋಲು ಪೂಜೆಯ ಪ್ರಧಾನ ಪೂಜಾರಿಯ ಮನೆಗೆ ಹೋಗಿ ಇಂತಹ ದಿನ ನಮಗೊಂದು ಅಮ್ನೋರು ಪೂಜೆ ಆಗಬೇಕು ನೀವು ಪೂಜೆಯ ಭಂಡಾರವನ್ನು ತೆಗೆದುಕೊಂಡು ಇಂತಹ ದಿನ ಮಧ್ಯಾಹ್ನಕ್ಕೆ ನಮ್ಮ ಮನೆಗೆ ಬಂದು ಪೂಜೆ ಮಾಡಿಕೊಂಡಬೇಕೆಂದು ತಾಂಬೂಲ ಕೊಟ್ಟು ಅವರಿಗೆ ಆಮಂತ್ರಿಸಬೇಕು. ನಂತರ ಮಧ್ಯಾಹ್ನವೇ ಪೂಜೆಗೆ ಕುಳಿತು ಪೂಜೆ ಮಾಡುವುದಕ್ಕೆ ಗುರುಉಪದೇಶವಿರುವ ನೆರೆಕರೆಯವರಿಗೂ, ನೆಂಟರಿಗೂ ಬಂಧು–ಮಿತ್ರರಿಗೂ ಆಮಂತ್ರಣವನ್ನು ಕೊಡುತ್ತಾರೆ. ಇದಕ್ಕೆ ಬಾಳೆಗೊನೆ ಕಡಿಯುವುದೆಂದು "ಬಾಳೆಗೊನೆಮುಹೂರ್ತ" ಕರೆಯುತ್ತಾರೆ. ಗೊನೆ ಕಡಿದ ಬಳಿಕ ಪೂಜೆಗೆ ಸಂಬಂಧಪಟ್ಟ ಎಲ್ಲಾ ಸಾಮಾನು ಪರಿಕರಗಳನ್ನು ಪೂಜೆಯ ನಡೆಸುವ ಮನೆಯವರು ಹೊಂದಿಸಿಕೊಳ್ಳುತ್ತಾರೆ. ಇಷ್ಟಮಿತ್ರ ಬಂಧುಗಳಿಗೆ ಆಮಂತ್ರಣ ನೀಡುತ್ತಾರೆ.

**೨. ಗೊಂದೋಲು ಪೂಜೆಯ ಪೂಜಾರಿಗಳ ಆಗಮನ, ಸ್ವಾಗತ ಮತ್ತು ಸಂಕಲ್ಪ ಪ್ರಾರ್ಥನೆ:**

ಪೂಜೆ ನಡೆಯುವ ಶುಭದಿನದಂದು ದೇವಿಗೆ ಸಂಬಂಧಿತ ಎಲ್ಲಾ ಪೂಜಾ ಪರಿಕರಗಳೊಂದಿಗೆ ಪೂಜಾರಿ ಬಳಗದವರು ಮಧ್ಯಾಹ್ನದ ಹೊತ್ತಿಗೆ ಮನೆಗೆ ಬರುತ್ತಾರೆ. (ಈ ಕಾರ್ಯಕ್ರಮವು ಕೆಲವೊಂದು ಕಡೆಗಳಲ್ಲಿ ಸಂಜೆ ಹೊತ್ತು ನಡೆಯುವುದುಂಟು.) ಪೂಜಾರಿಗಳು ಮತ್ತು ಭಂಡಾರ ಬರುವುದಕ್ಕೆ ಮುಂಚಿತವಾಗಿ ಪೂಜೆ ನಡೆಯುವ ಮನೆಯಲ್ಲಿ ದೇವರ ಕೋಣೆಯಲ್ಲಿ ದೀಪ ಹಚ್ಚಿಡುತ್ತಾರೆ. ಎಲ್ಲರೂ ಬಂದಾಗ ಪೂಜೆಗೆ ಎಣ್ಣೆ ತೆಗೆದು ಸ್ನಾನ ಮಾಡುವುದಕೋಸ್ಕರ ಪೂಜಾರಿಗಳಿಗೆ ಒಂದು ತಂಬಿಗೆ ನೀರನ್ನು ಕೊಡುತ್ತಾರೆ. ಅವರು ಮನೆಯೊಳಗೆ ಬಂದಾಗ ಒಂದು ಹರಿವಾಣದಲ್ಲಿ ಬೆಳ್ತಿಗೆ ಅಕ್ಕಿ, ತೆಂಗಿನೆಣ್ಣೆ, ಒಂದು ಲೋಟದಲ್ಲಿ ಹಾಲು ಕೇಪಳ ಹೂವು ಮತ್ತಿತರ ಬಿಡಿ ಹೂಗಳನ್ನು ಹಾಕಿಡುತ್ತಾರೆ. ಮತ್ತು ಮಂಡಲಾಕಾರದಲ್ಲಿ ಕುಳಿತುಕೊಳ್ಳಲು ಮರದ ಮಣೆಯನ್ನು ಇಡುತ್ತಾರೆ. ಮನೆಯೊಡತಿ ಅಥವಾ ಗುರುಉಪದೇಶವಿರುವ ಮಹಿಳೆಯರು ಇದ್ದು, ಅವರೊಂದಿಗೆ ನಾಲ್ಕು ಮಂದಿ ಮಹಿಳೆಯರು ಸೇರಿ ದೀಪ ಹಚ್ಚುತ್ತಾರೆ. ಆ ಬಳಿಕ ದೀಪಕ್ಕೆ ಐದು ಬಾರಿ ಚಮದಲ್ಲಿ ಎಣ್ಣೆ ಹಾಕಿ ದೀಪದ ಬುಡದಲ್ಲಿ ತಾಂಬೂಲವನ್ನಿಟ್ಟು ಐದು ಮಹಿಳೆಯರು ದೀಪದ ಬುಡಕ್ಕೆ ಅಕ್ಷತೆ ಹಾಕಿ ನಮಸ್ಕರಿಸುತ್ತಾರೆ. ಆ ಬಳಿಕ ಸೇರಿದವರೆಲ್ಲಿಗೂ ಅಕ್ಷತೆ ಕೊಟ್ಟು ಸಂಕಲ್ಪ ಪ್ರಾರ್ಥನೆ ಮಾಡುವರು. ಈ ಸಂದರ್ಭದಲ್ಲಿ ಮನೆಯ ಯಜಮಾನ ಯಾವುದಕ್ಕಾಗಿ ಈ ಪೂಜೆಯನ್ನು ಮಾಡುತ್ತೇನೆಂದು ಪ್ರಧಾನ ಪೂಜಾರಿಯವರ ಹತ್ತಿರ ಹೇಳುತ್ತಾರೆ. ಈ ಪೂಜೆಯನ್ನು ನಿರ್ವಿಘ್ನವಾಗಿ ನಡೆಯುವಂತೆ ಅವರು ಆರಾಧಿಸುತ್ತಿರುವ ಕುಲದೇವತೆಯನ್ನು, ಗ್ರಾಮದೇವರನ್ನು, ನಂಬಿಕೊಂಡು ಬಂದಿರುವ ಭೂತ ದೈವಗಳು ಅನುಗ್ರಹಿಸಬೇಕು ಎಂಬುದಾಗಿ ಪ್ರಾರ್ಥಿಸುತ್ತಾರೆ. ಬಳಿಕ

ಪೂಜಾರಿ ಪ್ರಾರ್ಥಿಸಿದ ಮೇಲೆ ಸೇರಿದವರೆಲ್ಲ ಕೈ ಮುಗಿದು ಪೂಜೆಗೆ ಕುಳಿತುಕೊಳ್ಳುವವರು ಒಟ್ಟಿಗೆ ಅಕ್ಷತೆ ಹಾಕಿ ಸಾಷ್ಟಾಂಗ ನಮಸ್ಕರಿಸುವರು. ಗೊಂದೋಲು ಪೂಜೆಯಲ್ಲಿ ಬೆಸಸಂಖ್ಯೆಯಾದ ಏಳು, ಒಂಭತ್ತು, ಹನ್ನೊಂದು ಗುರು ಉಪದೇಶವಿರುವ ಪೂಜಾರಿಗಳು ಇರುವರು. ಮರಾಟಿಗರು ಗುರು ಉಪದೇಶವನ್ನು 'ಗುರಿಮಾರಿಕೆ' ಎಂಬುದಾಗಿ ಕರೆಯುತ್ತಾರೆ. ಗುರು ಉಪದೇಶ ಇಲ್ಲದವರು ಪೂಜೆಯಲ್ಲಿ ಕುಳಿತುಕೊಳ್ಳಲು ಅವಕಾಶವಿಲ್ಲ. ಸ್ತ್ರೀ–ಪುರುಷರೆಂಬ ಭೇದ ಭಾವವಿಲ್ಲ.

**೩. ಪೂಜಾರಿಗಳಿಂದ ನಂದಾ ದೀಪಕ್ಕೆ ಎಣ್ಣೆ ಸಮರ್ಪಣೆ ಮತ್ತು ಗೌರವಾರ್ಪಣೆ:**

ಗೊಂದೋಲು ಪೂಜೆಯ ಮುಖ್ಯ ವಿಧಿಗಳಲ್ಲಿ ಮತ್ತೊಂದು ವಿಧಿ ನಂದಾ ದೀಪಕ್ಕೆ ಎಣ್ಣೆ ಅರ್ಪಣೆ ಮತ್ತು ನಮಸ್ಕಾರ ವಿಧಿಯು ನಡೆಯುವುದು. ಪೂಜೆಗೆ ಕುಳಿತುಕೊಳ್ಳುವವರು ಮೊದಲು ದೀಪದ ಬುಡಕ್ಕೆ ಅಕ್ಷತೆ ಹಾಕಿ ನಮಸ್ಕರಿಸಿ ದೀಪಕ್ಕೆ ಐದು ಭಾರಿ ಚಮಚದಿಂದ ಎಣ್ಣೆಯನ್ನು ಎರೆಯುತ್ತಾರೆ. ಆ ಬಳಿಕ ಬಲಗೈಯಲ್ಲಿ ಚಮಚ ಹಿಡಿದು ಎಡಗೈ ಅಂಗೈಗೆ ಒಂದು ಚಮಚ ಎಣ್ಣೆ ಹಾಕುತ್ತಾರೆ. ಮೊದಲಿಗೆ ದರ್ಶನ ಪೂಜಾರಿ, ಅವರ ನಂತರ ಈಗಾಗಲೇ ಪ್ರದಕ್ಷಿಣಾಕಾರದಲ್ಲಿ ಕುಳಿತಿರುವ ಎಲ್ಲಾ ಪೂಜಾರಿಗಳು ದೀಪಕ್ಕೆ ಎಣ್ಣೆ ಹಾಕಿ ಎಡಗೈಯಲ್ಲಿ ಎಣ್ಣೆ ತೆಗೆದುಕೊಂಡು ಕುಳತಲ್ಲಿಯೇ ನೆಲಕ್ಕೆ ಪವಿತ್ರ ಬೆರಳಿನಿಂದ ಐದು ಬೊಟ್ಟು ಉದ್ದಕ್ಕೆ ಮತ್ತು ಐದು ಬೊಟ್ಟು ಅಡ್ಡಕ್ಕೆ ಬರೆ ಎಳೆದು ನಮಸ್ಕರಿಸುತ್ತಾರೆ. ನಂತರ ಎಲ್ಲರೂ ಬೆರಳಿನಿಂದ ಒಬ್ಬೊಬ್ಬರ ಕೈಗೆ ಎಣ್ಣೆ ಬದಲಾಯಿಸುತ್ತಾರೆ. ತರುವಾಯು ಮಹಮ್ಮಾಯಿ ದೇವರ ಎಣ್ಣೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಆ ಎಣ್ಣೆಯನ್ನು ತಲೆಯಿಂದ ಪಾದದ ವರೆಗೆ ಕೈಯಿಂದ ಸವರುತ್ತಾರೆ. ಆ ಬಳಿಕ ಕುಟುಂಬದ ಯಜಮಾನ ಅಥವಾ ಯಾರಾದರೊಬ್ಬರು ಕುಳಿತವರಿಗೆ ಎಣ್ಣೆ ಹಚ್ಚುತ್ತಾರೆ. ನಂತರ ಅಮೃತವನ್ನು (ಶೇಂದಿ / ತುಳುವಿನಲ್ಲಿ ಕಳಿ) ಕುಳಿತವರಿಗೂ ಹಾಗೂ ಶಕ್ತಿ ಕೂರಿಸುವ ಮಹಿಳೆಗೂ ಕೊಟ್ಟು ಕುಡಿದ ಬಳಿಕ ತಾಂಬೂಲ ಸೇವನೆ ಮಾಡಿ ದೀಪದ ಬುಡಕ್ಕೆ ಅಕ್ಷತೆಯನ್ನು ಹಾಕಿ ಎಲ್ಲರೂ ನಮಸ್ಕರಿಸಿ ಎಲ್ಲರೂ ಎದ್ದು ನಿಂತು ದೀಪಕ್ಕೆ ಸುತ್ತು ಬಂದು ಸ್ನಾನಕ್ಕೆ ಹೋಗುವರು. ಸ್ನಾನ ಮಾಡಿ ಬರುವಾಗ ಗಂಧ ಸವೆಸಿ ಮತ್ತು ಒಂದು ಕೊಡಪಾನ ಶುದ್ಧ ನೀರು ತರುವರು. ಕುಡ್ತೆ ನೀರು ಕುರ್ದಿನೀರು (ಪುಣ್ಯ ನೀರು) ಎಲ್ಲರಿಗೂ ಸಿಂಪಡಿಸಿ ಸ್ವಲ್ಪ ಸೇವಿಸಿ ಬಳಿಕ ತುಳಸಿ ಕಟ್ಟೆಯ ಪಕ್ಕದಲ್ಲಿ ವಿಭೂತಿ ಧಾರಣೆ ಮಾಡುವರು.

**೪. ಬಲಿ ನೀಡಲಿರುವ ಪ್ರಾಣಿಗಳಿಗೆ ಆಹಾರ ಸಮರ್ಪಣೆ (ಪಾಯಿದು):**

ಗೊಂದೋಲು ಪೂಜೆಯನ್ನು ನೆರವೇರಿಸಿಕೊಡುವ ಪೂಜಾರಿಗಳು ಶುರ್ಚಿರಭೂತರಾಗಿ ಬಲಿ ನೀಡಲಿರುವ ಕೋಳಿ ಮತ್ತು ಹಂದಿಗಳಿಗೆ ಆಹಾರ ನೀಡುವ ಮತ್ತೊಂದು ವಿಧಿಯನ್ನೂ ನಡೆಸುವರು ಈ ವಿಧಿಗೆ ಮರಾಟಿಗರು 'ಪಾಯಿದು' ಎಂದು ಕರೆಯುವರು. ಪ್ರಾರಂಭದಲ್ಲಿ ಕೋಳಿಗಳ ಕಾಲು ತೊಳೆದುಶುದ್ಧಮಾಡಿ ದೂಪ ತೋರಿಸಿಹೂವುಅಕ್ಷತೆಹಾಕಿ ಮೂರುಬಗೆಯಬೊಟ್ಟುಹಾಕಿ ಗುರುಪದೇಶ'ಮಂತ್ರವನ್ನು ಕೋಳಿಯ ಕಿವಿಯಲ್ಲಿ ಜಪಿಸಿ ಅದರ ಕೊರಳಿಗೆ ಅಕ್ಷತೆ ಹಾಕುತ್ತಾರೆ. ಮೊದಲಿಗೆ ಹೆಂಟೆಗೆ ನಂತರ ಗಂಡುಕೋಳಿಗಳಿಗೆ ಆ ಬಳಿಕ ಭೈರವನ ಕೋಳಿಗೆ 'ಪಾಯಿದು' ಬೊಟ್ಟು ಹಾಕಿ ಆಹಾರ ನೀಡುತ್ತಾರೆ. ಅದೇ ರೀತಿ ಬಲಿ ನೀಡಲಿರುವ ಹಂದಿಗೂ ಕೂಡ ಪಾಯಿದು ಮಾಡುತ್ತಾರೆ. ನಂತರ ಎಲ್ಲರೂ ಸೇರಿ ಊಟ ಮಾಡಿ ಇದೇ ಸಂದರ್ಭದಲ್ಲಿ ಪೂಜೆ ಮಾಡುವವರ ಮನೆಯಲ್ಲಿ ಮನೆಯೊಡತಿ ಅಮವಾಸ್ಯೆಯ ದಿನದಂದೂ ಪಿತೃಗಳಿಗೆ ಎಡೆ ಬಡಿಸುವ ರೀತಿಯಲ್ಲಿ ಮಾಡಿರುವ ಎಲ್ಲಾ ಅನ್ನ, ಪದಾರ್ಥವನ್ನು ಆ ಎಲೆಯಲ್ಲಿ ಬಡಿಸಿ

ಮೀಸಲಿಡುತ್ತಾರೆ. ಅಲ್ಲದೆ ಊಟ ಮಾಡುವವರು ತಮ್ಮ ಎಲೆಯಿಂದ ಸ್ವಲ್ಪ ಅನ್ನದ ಅಗಳನ್ನು ನೆಲಕ್ಕೆ ಹಾಕಿ ಬಲ ಅಂಗೈಯಲ್ಲಿ ನೀರು ತೆಗೆದುಕೊಂಡು ಎಲೆಯ ಸುತ್ತಾ ಆಕಾರದಲ್ಲಿ ನೆಲಕ್ಕೆ ಬಿಟ್ಟು ಆ ನಂತರ ಊಟ ಮಾಡುತ್ತಾರೆ.

**೫. ಮಹಮ್ಮಾಯಿ ಮತ್ತು ಭೈರವನ ಪೂಜೆಗೆ ಪೂಜಾ ಸಾಮಾಗ್ರಿಗಳನ್ನು ಜೋಡಿಸುವುದು ಹಾಗೂ ಮಂಡಲ ರಚನೆ:**

ಸಾಮಾನ್ಯವಾಗಿ ಎಲ್ಲರ ಊಟ ಆದ ಬಳಿಕ ಪೂಜೆ ನಡೆಯುವ ಜಾಗವನ್ನು ಸ್ವಚ್ಛ ಮಾಡಿ ಎಲ್ಲಾ ಪೂಜಾರಿಗಳು ಸೇರಿ ಸಾಯಂಕಾಲ ನಡೆಯುವ ಭೈರವ ಆರಾಧನೆಗೆ ಬೇಕಾಗಿರುವ ಎಲ್ಲಾ ಪೂಜಾ ಸಾಮಾಗ್ರಿಗಳನ್ನು (ವಿವರಣೆಯನ್ನು ಈಗಾಗಲೇ ಭೈರವಾರಾಧನೆಯಲ್ಲಿ ತಿಳಿಸಿರುವೆನು) ಜೋಡಿಸುತ್ತಾರೆ. ಅಲ್ಲದೆ ಗೊಂದೋಲು ಪೂಜೆಗೆ ಬೇಕಾಗಿರುವ ಎಲ್ಲಾ ಸಾಮಾಗ್ರಿಗಳನ್ನು ಜೋಡಿಸಿರುತ್ತಾರೆ. ಜೊತೆಗೆ ಗೊಂದೋಲು ಪೂಜೆಗೆ ಸಂಬಂಧಿಸಿದ ಮಹಮ್ಮಾಯಿ ಮಂಟಪವನ್ನು ಪೂರ್ಣವಾಗಿ ಅಲಂಕರಿಸುತ್ತಾರೆ. ದೇವಿಯ ಬಿಂಬದ ಮೇಲ್ಭಾಗದಲ್ಲಿ ಒಂದು ಬಿಳಿಯ ಬಟ್ಟೆಯನ್ನು ಕಟ್ಟುತ್ತಾರೆ ಇದಕ್ಕೆ 'ಮೆಲ್ಕಾಪು' ಎನ್ನುವರು. ಮುಂಭಾಗದಲ್ಲಿ ಪೂಜೆಯನ್ನು ನೆರವೇರಿಸುವ ಪೂಜಾರಿಯ ಕೈಗೆಟುವಷ್ಟು ದೂರದಲ್ಲಿ ಗುರುಪದೇಶ ಆಗಿರುವ ಐದು ಮಂದಿ ಮಹಿಳೆಯರು ಸೇರಿ ಹಾಜರಿರುವ ಎಲ್ಲಾ ಪೂಜಾರಿಗಳು ಸೇರಿಕೊಂಡು ಅಲಂಕೃತವಾದ ಒಂದು ದೀಪವನ್ನು ಕುಳ್ಳಿರಿಸುವರು. ಬಳಿಕ ಗುರುಪದೇಶ ಇರುವ ಮಹಿಳೆಯರು ದೀಪಕ್ಕೆ ಬತ್ತಿ ಸಹಿತ ಎಣ್ಣೆ ಹಾಕಿ ತಾಂಬೂಲವನ್ನು ದೀಪದ ಬುಡದಲ್ಲಿಟ್ಟು ನಮಸ್ಕಾರ ಮಾಡಿ ತೆರಳುವರು. ಮಹಮ್ಮಾಯಿಯನ್ನು ಕೂರಿಸಲು ಈ ಮೊದಲು ತಿಳಿಸಿದಂತೆ ಭೂಮಿಗೆ ಐದು ಎಣ್ಣೆ ಬೊಟ್ಟು ಹಾಕಿ ಮತ್ತು ಹೂವುಗಳನ್ನಿಟ್ಟು (ಮಹಮ್ಮಾಯಿಚೆ ನಾವೆ ಮೂಟ್ ತೋವುತೋ "ಮಹಮ್ಮಾಯಿ ದೇವರಮೂರ್ತಿಯನ್ನು ಇಡುವೆ" ಎಂದುಹೇಳಿಬೆಳ್ತಕ್ಕಿಯನ್ನು ಹಾಕಿ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಾಲ್ಕು ದಿಕ್ಕಿಗೆ ದ್ವಾರವನ್ನು ರಚನೆ ಮಾಡಿ ಮಂಡಲದ ಹೊರಭಾಗದಲ್ಲಿ ಗೋವು, ಕಟಾರಿ, ನಾಗ, ತ್ರಿಶೂಲ ಮುಂತಾದ ಪ್ರಕೃತಿಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸುತ್ತಾರೆ. ಇದಾದ ನಂತರ ಭಂಡಾರ ಇಡಲು ಮಂಡಲದ ಎಡಗಡೆಗೆ ಗೊಂದೋಲುಗೆ ಮಂಡಲ ಹಾಕಿದ ರೀತಿಯಲ್ಲಿ ಎಣ್ಣೆ, ನೀರು, ವಿಭೂತಿಯ ಬೊಟ್ಟು ಹಾಕಿ ಭಂಡಾರ ಪಾತ್ರೆಯಲ್ಲಿ ಅಮೃತ ತುಂಬಿಸಿ ಪಾತ್ರೆ ನಿಲ್ಲಲು ಸಿಂಬಿ ಇಟ್ಟು ಭಂಡಾರ ಇಡುತ್ತೇನೆ ಎಂದು ಹೇಳಿ (ಭಂಡಾರ್ ಘ್‌ಸ್‌ವುತ್ತೋ) ನೆರೆದ ಭಕ್ತಾದಿಗಳ ಅನುಮತಿ ಪಡೆದು ಭಂಡಾರ ಪ್ರತಿಷ್ಠಾಪಿಸುತ್ತಾರೆ. ಭಂಡಾರದ ಸುತ್ತಲೂ ವೀಳ್ಯದೆಲೆ ಅಡಿಕೆ ಅದೇ ರೀತಿ ಭೈರವನ ಸ್ವಸ್ತಿಕಕ್ಕೂ ಹೂವು, ವೀಳ್ಯದೆಲೆ ಇಡುತ್ತಾರೆ. ಜೊತೆ ಜೊತೆಗೆನೆ ಹಂದಿ ಬಲಿ ಮಾಡುವ ಕತ್ತಿಗೆ, ಕೋಳಿ ಬಲಿ ನೀಡುವ ಕತ್ತಿಗೆ (ಕರಕ್) ಹೂವು, ಕೇಪಳ ಹಾಕಿ ಅದೇ ರೀತಿ ಎಲ್ಲಾ ಪ್ರಸಾದಗಳನ್ನು ತಯಾರು ಮಾಡಿಟ್ಟು ಪೂಜಾ ಪೂರ್ವ ಸಿದ್ಧತೆಯನ್ನು ಮಾಡುತ್ತಾರೆ.

**೬. ಗದ್ದಿಗೆ ಏರಿಸುವುದು ಮಹಮ್ಮಾಯಿ ಕಲಶ ಸ್ಥಾಪನೆ 'ಈಸ್ ದೇವ್'ಪೂಜೆ:**

ಸೂರ್ಯಾಸ್ತದ ಸಮಯದಲ್ಲಿ ಮನೆಯ ಹೊರಗಡೆ ಭೈರವನ ಬನದಲ್ಲಿ ಎರಡನೇ ಹಂತದ ಪೂಜೆ ನಡೆಯುತ್ತದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಭೈರವನ ಪೂಜೆಯು ಗೊಂದೋಲು ದಿನದಂದೂ ಪ್ರತ್ಯೇಕವಾಗಿ ಭೈರವನ ಬನದಲ್ಲಿ ಪೂಜೆ ಮಾಡುತ್ತಾರೆ. ಅದರೆ ಉಡುಪಿ ಜಿಲ್ಲೆಯ ಹೆಚ್ಚಿನ ಕಡೆಗಳಲ್ಲಿ ಗೊಂದೋಲು ಪೂಜೆಯ ಸಂದರ್ಭ ಹಲವಾರು ಕಡೆಗಳಲ್ಲಿ ಭೈರವನನ್ನೂ ಮನೆಯ ಒಳಗಡೆ ಪೂಜೆ ಮಾಡುತ್ತಾರೆ. ಪ್ರದೇಶದಿಂದ ಪ್ರದೇಶಕ್ಕೆ ಭೈರವನ ಆರಾಧನೆ ವ್ಯತ್ಯಾಸವನ್ನು ಹೊಂದಿದೆ. ಉಡುಪಿ ಜಿಲ್ಲೆಯಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದ್ದು ಭೈರವನ ಆರಾಧನೆಯ ವಿಧಿ ನಿಷೇಧಗಳು ಸಡಿಲತೆಗೊಂಡಿರುವುದು ಕಂಡು ಬರುತ್ತದೆ.

ಭೈರವ ಆರಾಧನೆಯ ಮೂಲತಃ ತಾಂತ್ರಿಕ ಕ್ರಿಯಾವಿಧಿ ವಿಧಾನಗಳ ಅವಲೋಕಿಸಿದಾಗ ಶೈವ ಪರಂಪರೆ ಕಂಡು ಬಂದರೂ ವೈಷ್ಣವ ಪರಂಪರೆಯ ಪ್ರಭಾವ ಹಾಗೂ ಐತಿಹಾಸಿಕ ಕಾಲಘಟ್ಟದಲ್ಲಿ ವೈದಿಕ ಆಚರಣೆಯ ಪ್ರಭಾವಕ್ಕೆ ಒಳಗಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ರಾತ್ರಿ ಸುಮಾರು ಎಂಟು ಗಂಟೆಗೆ 'ಈಸ್‌ದೇವ್' ಪೂಜೆ ನಡೆಯುತ್ತದೆ. ಪೂಜಾರಿಯೊರ್ವನೊಬ್ಬ ಮನೆಯ ಯಜಮಾನನ ಅಡುಗೆ ಮನೆಯ ಒಲೆಯ ಬಳಿಗೆ ಹೋಗಿ ಒಲೆಗೆ ಪಂಚಕಜ್ಜಾಯವನ್ನು ಒಲೆಗೆ ಸಮರ್ಪಿಸಿ ಅಲ್ಲಿನ ಬೂದಿಯನ್ನು ತಂದು ಪೂಜೆ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಸ್ಮಶಾನಕ್ಕೆ ಹೋಗಿ ಅಲ್ಲಿಂದ ಭಸ್ಮ ತಂದು ಪೂಜೆ ಮಾಡುತ್ತಿದ್ದರಂತೆ, ಕಾಲ ಕ್ರಮೇಣ ಸ್ಮಶಾನದ ಭಸ್ಮಕ್ಕೆ ಬದಲಾಗಿ ಒಲೆಯ ಬೂದಿಯನ್ನೆ ಭಸ್ಮದ ರೂಪದಲ್ಲಿ ಪೂಜೆಗೆ ಉಪಯೋಗಿಸುತ್ತಾರೆ ಎಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ಮಾಹಿತಿಯನ್ನು ನೀಡಿರುವರು. ನಂತರ ಪ್ರಧಾನ ಪೂಜಾರಿಗಳಿಗೆ ಸಹಾಯಕ ಪೂಜಾರಿಗಳು ನಮಸ್ಕರಿಸಿ ಗೌರವ ಸಲ್ಲಿಸುತ್ತಾರೆ.

**೭. ಮಹಮ್ಮಾಯಿ ದೇವರ ಗಣಗಳಿಗೆ ಬಲಿ ಕೊಡುವ ಕಾರ್ಯಕ್ರಮ:**

ಈಸ್‌ದೇವ್ ಪೂಜೆ ಆದ ಮೇಲೆ ಗೊಂದೋಲು ಪೂಜೆಯ ಪ್ರಕ್ರಿಯೆಯಲ್ಲಿ ಬಲಿ ನೀಡುವ ಕಾರ್ಯಕ್ರಮ. ಮೊದಲಿಗೆ ಹೆಣ್ಣು ಕೋಳಿಯನ್ನು ಬಲಿಕೊಟ್ಟ ಮೇಲೆ ಗಂಡು ಕೋಳಿ, ನಂತರ ಹಂದಿಯ ಬಲಿ ನಡೆಯುತ್ತದೆ. ಕೋಳಿಯ ಕಾಲನ್ನು ಶುದ್ಧ ಮಾಡಿ ದೂಪ ತೋರಿಸಿ ಅದರ ಕಿವಿಯಲ್ಲಿ ಮಂತ್ರೋಪದೇಶ ಮಾಡಿ ಕೊರಳಿಗೆ ಮಂತ್ರಾಕ್ಷತೆ ಹಾಕಿ ಬೇರೆಯವರ ಕೈಗೆ ನೀಡುತ್ತಾರೆ. ಬಲಿ ತೆಗೆಯುವ ವ್ಯಕ್ತಿಗೆ (ಕರಕ್) ದೇವರ ಬಳಿಯಲ್ಲಿಟ್ಟ ಕತ್ತಿಯನ್ನು ತೆಗೆದು ಪೂಜಾರಿಗೆ ಕೊಡುತ್ತಾರೆ. ಈ ಸಂದರ್ಭದಲ್ಲಿ ದೇವಿಯ ಗದ್ದುಗೆಯ ಅನತೆ ದೂರದಲ್ಲಿ ಭೈರವನಿಗೆ ರಕ್ತ ತರ್ಪಣ ಮಾಡುವ ಸಲುವಾಗಿ ಒಂದು ಕಲ್ಲಿನ ಮೇಲೆ ಬಾಳೆಎಲೆಯಲ್ಲಿ ಅರಳು, ಪಾತ್ರೆ ಅಥವಾ ಅಡಿಕೆ ಹಾಳೆಯಲ್ಲಿ ಕುರ್ದಿ ನೀರು ಕೊಲ್‌ತಿರಿ, ಅಕ್ಕಿ ತೆಂಗಿನಕಾಯಿ ವೀಳ್ಯದೆಲೆಯಿಂದ ಕೂಡಿದ ಪನಿಯಾರವನ್ನು ಕಲ್ಲಿನ ಪಕ್ಕದಲ್ಲಿ ತಯಾರು ಮಾಡಿ ಇಡುತ್ತಾರೆ. ಬಲಿ ನೀಡಲು ಈಗಾಗಲೇ ಈಡು ಬಿಟ್ಟಿರುವ ಹಾಗೂ ಹರಕೆಯ ಪ್ರಾಣಿ-ಪಕ್ಷಿಗಳನ್ನು ಸಿದ್ಧ ಮಾಡಿ ಇಡುವರು. ಈ ಸಂದರ್ಭದಲ್ಲಿ ಪರಶುರಾಮನು ಅಸುರ ಕ್ರಿಯೆಗೆ ತೆರಳುತ್ತೇನೆ ಎಂದು ಮಹಮ್ಮಾಯಿಯಲ್ಲಿ ಬೇಡಿಕೊಂಡು ರಕ್ತ ತರ್ಪಣ ನೀಡುವಲ್ಲಿಗೆ ಹೋಗುತ್ತಾನೆ. ಅಲ್ಲಿ ಭೈರವನಿಗೆ ರಾಶಿ ಬಡಿಸುವ ಕ್ರಮವೂ ಕೂಡಾ ಕೆಲವು ಕಡೆಗಳಲ್ಲಿ ಕಂಡುಬಂದಿರುತ್ತದೆ. ಜೊತೆಗೆ ಕೆಲವೊಂದು ಕಡೆಗಳಲ್ಲಿ ಹದಿನಾರು ಎಡೆಗಳನ್ನು ರಾಶಿಯ ಸುತ್ತಲೂ ಬಿಡಿಸುವ ಕ್ರಮವಿದೆ. ನೆರೆದವರೆಲ್ಲರೂ ಕೂಡಾ ಭೈರವನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ನಂತರ ಪ್ರಸಾದವನ್ನು ನೆರೆದ ಗಣ್ಯರಿಗೆ ನೀಡುತ್ತಾರೆ. ಹಂದಿ ಬಲಿ ನೀಡುವ ಸಂದರ್ಭದಲ್ಲಿ ಹಂದಿಯ ಕೈ ಕಾಲುಗಳನ್ನು, ಬಾಯಿ ಕಿವಿಗಳನ್ನು ಹಿಡಿದು ನೆಟ್ಟಗೆ ನಿಲ್ಲಿಸಿದಾಗ ಬಲಿ ನೀಡುತ್ತಾರೆ. ತಲೆಯನ್ನೂ ಕತ್ತರಿಸಿ ದೊಡ್ಡ ಪಾತ್ರೆಯಲ್ಲಿಟ್ಟು ಅದರ ಬಲಕೈಯನ್ನೂ ಕತ್ತರಿಸಿ ಹಂದಿಯ ಬಾಯಿಗೆ ಅಡ್ಡಲಾಗಿ ಇಡುತ್ತಾರೆ. ನಂತರ ತಂದು ಪೂಜೆಯ ಪಕ್ಕದಲ್ಲಿ ಇಟ್ಟು ಬೂದು ಕುಂಬಳಕಾಯಿ ಅಥವಾ ಸೌತೆಕಾಯಿಯಲ್ಲಿ ದೀಪವನ್ನೂ ಹಚ್ಚಿ ಇಡುತ್ತಾರೆ. ಬಲಿ ನೀಡಿರುವ ಹಂದಿಯ ಸ್ವಲ್ಪ ಭಾಗ ಮಾಂಸವನ್ನು ತೆಗೆದು ನೈವೇದ್ಯಕ್ಕಾಗಿ ತೆಗೆದಿಡುತ್ತಾರೆ. ನಂತರ ರಕ್ತ ಪಾತ್ರೆಯನ್ನು ತೆಗೆದು ಆ ಸ್ಥಳವನ್ನು ಸ್ವಚ್ಛ ಮಾಡುತ್ತಾರೆ. ಎಲ್ಲಾ ಕೋಳಿ, ಹಂದಿಯ ರಕ್ತ ತರ್ಪಣವಾದ ಮೇಲೆ ತೆಂಗಿನಕಾಯಿ ಒಡೆದು ಸ್ಥಳ ಶುದ್ಧ ಮಾಡುತ್ತಾರೆ. ನಂತರ ದೇವಿಗೆ ನೈವೇದ್ಯ ಅರ್ಪಣೆ ಮಾಡುವರು. ನಂತರ ಈಗಾಗಲೇ ಇಟ್ಟಿರುವಂತಹ ಭಂಡಾರ ಪಾತ್ರೆಯನ್ನು ಸರಿಸುತ್ತಾರೆ. ನಂತರ ದೇವರಿಗೆ ಮಂಗಳಾರತಿ ಮಾಡುವ ಕ್ರಮ ಜರುಗಿಸುತ್ತಾರೆ.

ಏಕಾರತಿಯಿಂದ ಪ್ರಾರಂಭಿಸಿ ಕೊನೆಗೆ ಮಂಗಳಾರತಿಯನ್ನು ಹರಿವಾಣದಲ್ಲಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಐದು ಜನ ಮುತ್ತೈದೆಯರು ಸೇರಿ ಶೋಭಾನೆ ಹಾಡುತ್ತಾರೆ. ನಂತರ ಮುತ್ತೈದೆಯರು ಕುಂಕುಮದ ಬೊಟ್ಟನ್ನು ದೀಪಕ್ಕೂ, ದೇವಿಗೂ, ಭೈರವನಿಗೂ ಹಾಕಿ ಪೂಜೆಗೆ ಕುಳಿತವರಿಗೆ ಬೊಟ್ಟ ಹಾಕಿ ಆದ ಬಳಿಕ ಆರತಿಯನ್ನು ಸಭೆಗೆ ತೋರಿಸಿ ಆರತಿಯಿಂದ ಒಂದು ಭಕ್ತಿಯನ್ನೂ ದೀಪಕ್ಕೂ, ಒಂದು ಭತ್ತಿಯನ್ನು ಅಡುಗೆ ಒಲೆಗೂ ಹಾಕಿ ಆರತಿ ದೇವರ ಬಳಿಗೆ ತಂದು ಪೂಜಾರಿಯು ದೇವರ ಬಳಿ ಮೆತ್ತಗೆ ಪ್ರಾರ್ಥನೆ ಮಾಡುತ್ತಾನೆ. ಕುಟುಂಬದ ಹಿರಿಯರು ಮೊದಲಿಗೆ ಪ್ರಾರ್ಥನೆ ಮಾಡಿದ ಬಳಿಕ ಉಳಿದವರು ಪ್ರಾರ್ಥಿಸಿ ಕೊನೆಗೆ ದರ್ಶನ ಪಾತ್ರಿ ಪ್ರಾರ್ಥಿಸಿ ಆದ ಬಳಿಕ ಹಣ್ಣು ಕಾಯಿ ಕೊಡುತ್ತಾರೆ. ಮೊದಲಿಗೆ ಹತ್ತು ಸಮಸ್ತರಿಗೆ ಪ್ರಸಾದ, ಊರಿನ ಗುರಿಕಾರನ ಕೈಗೆ ನೀಡುತ್ತಾರೆ. ಬಳಿಕ ಪರವೂರಿನವರಿಗೆ ಪ್ರಸಾದ ನಂತರ ನೆರೆದವರೆಲ್ಲರಿಗೂ ಪ್ರಸಾದ ನೀಡುತ್ತಾರೆ. ಕೊನೆಗೆ ಕುಟುಂಬದ ಎಲ್ಲರ ಸಮ್ಮುಖದಲ್ಲಿ ಸೇವೆ ಸಲ್ಲಿಸುತ್ತಿರುವ ಮನೆಯ ಯಜಮಾನನಿಗೆ ಪ್ರಸಾದ ನೀಡುತ್ತಾರೆ ನಂತರ ಗೊಂದೋಲು ಪೂಜೆಯ ಗದ್ದುಗೆ ಎಬ್ಬಿಸುವರು. ಪೂಜೆಗೆ ಕುಳಿತವರು ಮತ್ತು ಶಕ್ತಿ ಕೂರಿಸಿದ ಮಹಿಳೆಯರು ಸೇರಿ ದೇವರ ಬಿಂಬ ಕಳಸ ಸಮೇತ ಮೆಲೆತ್ತಿ ಮೂರು ಭಾರಿ ಕೆಳಗೆ ಮೇಲೆ ಮಾಡಿ ಕಲಶ ಪಾತ್ರೆಯನ್ನು ಕೈಯಲ್ಲಿ ಹಿಡಿದು ಮೂರ್ತಿ ಬಿಂಬವನ್ನು ಅಕ್ಕಿಯ ಮೇಲಿಟ್ಟು ಕಲಶ ಪಾತ್ರೆಯ ತೀರ್ಥವನ್ನೂ ಎಲ್ಲರಿಗೂ ಕೊಟ್ಟು ಈಗಾಗಲೇ ಪ್ರತಿಷ್ಠಾಪಿಸಲ್ಪಟ್ಟ ದೀಪವನ್ನು ಅಲ್ಲಿಂದ ಸ್ವಲ್ಪ ಸರಿಸಿ ಪೂಜೆಗೆ ಕುಳಿತ ಎಲ್ಲರೂ ಪರಸ್ಪರ ಕೈ ಮುಗಿದು ದೀಪಕ್ಕೆ ಒಂದು ಸುತ್ತು ಬಂದು ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವುದು ಕಂಡು ಬಂದಿರುತ್ತದೆ.

**೮. ಅಗ್ನಿಸೇವೆ / ಲಾಗೇಲೋ ಕುಣಿತ:**

ಲಾಗೇಲೋ ಕುಣಿತರವರು ಗದ್ದಿಗೆ ಬಳಿ ಬಂದು ದೀಪಕ್ಕೆ ಎಣ್ಣೆ ಹಾಕಿ ಪೂಜಾರಿಯಿಂದ ಎಲೆ ಅಡಿಕೆಯೊಂದಿಗೆ ತಾಳವನ್ನು ಇಟ್ಟು ಸಂಧಿ ಹೇಳುವವರ ಕೈಗೆ ನೀಡುತ್ತಾರೆ. ಜೊತೆಯಲ್ಲಿ ಎಣ್ಣೆಯ ಕವಂಗ, ಪಂಚ ದೀವಟಿಗೆಯನ್ನು ದೇವರ ದೀಪದಿಂದ ಉರಿಸಿ ಪೂಜಾರಿಯ ಕೈಗೆ ಕೊಡುತ್ತಾರೆ. ಇದೇ ಸಂದರ್ಭದಲ್ಲಿ ನೆರೆದ ಭಕ್ತರು ಜಯಘೋಷವನ್ನು ಹಾಕುತ್ತಾರೆ. ದೇವರ ಕೋಣೆಯಿಂದ ಅಂಗಳದ ತನಕ ಪೂಜಾರಿಯು ದೇವರ ಸಂಧಿಯನ್ನು ಆರಂಭಿಸಿ ಅಂಗಳಕ್ಕೆ ಬರುತ್ತಾರೆ. ಅವರನ್ನು ಅನುಸರಿಸಿಕೊಂಡು ದೀವಟಿಗೆ ಹಿಡಿದವರು ಒಬ್ಬೊಬ್ಬರಾಗಿ ಬಂದು ಚಪ್ಪರವಿಲ್ಲದ ಕಡೆಯಲ್ಲಿ ಮಂಡಲಾಕೃತಿಯಲ್ಲಿ ಕುಣಿಯಲು ಪ್ರಾರಂಭಿಸುತ್ತಾರೆ. ಗೊಂದೋಲು ಕುಣಿತವು ಏಳು, ಒಂಬತ್ತು, ಹನ್ನೊಂದು ಸುತ್ತು ಎಂಬ ಕ್ರಮದಲ್ಲಿ ಕುಣಿಯುತ್ತಾರೆ. ದರ್ಶನ ಪಾತ್ರಿಗಳು ಐದು ಅಥವಾ ಏಳು ಸುತ್ತಿನಲ್ಲಿ ಒಬ್ಬರು ಬದಲಾವಣೆಯಾಗುತ್ತಿರುತ್ತಾರೆ. ಕೊನೆಗೆ ಪ್ರಧಾನ ದರ್ಶನ ಪಾತ್ರಿ (ಪರಶುರಾಮನ) ಆಗಮನವಾಗಿ ಅಂಗಳಕ್ಕೆ ದರ್ಶನದಲ್ಲಿ ಬಂದು ಕುಣಿತದವರಿಂದ ದೀವಟಿಗೆಯನ್ನೂ ತೆಗೆದುಕೊಂಡು ಸಭೆಯ ಸುತ್ತ ದೀವಟಿಗೆ ನೃತ್ಯವನ್ನೂ ಮಾಡುತ್ತಾ ಪೂಜೆ ಮಾಡಿದ ಕುಟುಂಬದ ಹಿರಿಯರಲ್ಲಿ ಯಾತಕ್ಕಾಗಿ ನನ್ನ ಸೇವೆ ಮಾಡುತ್ತಿದ್ದರೆಂದು ಕಾರಣವನ್ನು ಕೇಳುತ್ತಾನೆ. ಅವರಿಗೆ ಅಭಯವನ್ನಿತ್ತು ಸಭೆಗೆ ಪ್ರಸಾದ ನೀಡಲು ತಿಳಿಸುತ್ತಾನೆ. ಮೊದಲಿಗೆ ಬ್ರಹ್ಮ ಸಭೆಗೆ ಪ್ರಸಾದ ನೀಡಿ, ತುಳಸಿಕಟ್ಟೆಯಲ್ಲಿ ಎರಡೆಲೆ ಪ್ರಸಾದವನ್ನಿಟ್ಟು ಹತ್ತು ಸಮಸ್ತರ ಪ್ರಸಾದವನ್ನು ಊರಿನ ಗುರಿಕಾರನ ಕೈಗೆ ನೀಡುತ್ತಾನೆ.

ಆ ಬಳಿಕ ಪೂಜೆ ನಡೆಸಿದವರ ಮನೆಗೆ ಪ್ರಸಾದಕ್ಕೆ ಮೊದಲು ದೇವರಿಗೆ ಅಗ್ನಿ ಫಲಹಾರ ನೀಡುತ್ತಾರೆ. ಉರಿಯುತ್ತಿರುವ ಭತ್ತಿಯನ್ನು ಬಾಯಿಯ ಒಳಗಡೆ ಹಾಕಿ ಒಂದೊಂದೇ ಭತ್ತಿಯನ್ನು ಸೇವಿಸುತ್ತಾ ದೇವಿಯ ಪ್ರತೀಕವಾಗಿರುವ ದರ್ಶನ ಪಾತ್ರಿಯು ಸಂತೋಷ ಪಡುತ್ತಾರೆ. ಕೊನೆಗೆ ಕುಟುಂಬದವರೆಲ್ಲರ ಪ್ರಾರ್ಥನೆಯನ್ನು ಆಲಿಸಿ ಅಭಯವನ್ನು

ಹಿತವಚನವನ್ನು ನೀಡುತ್ತಾನೆ. ಮೊದಲಿಗೆ ರಾಕ್ಷಸನ ಹಾಡನ್ನು ಹೇಳಿ ಕುಣಿಯುತ್ತಾರೆ. ನಂತರ ಶೃಂಗಾರದ ಹಾಡು ಬಳಿಕ ರಾಕ್ಷಸ ದೇವಿಯೊಂದಿಗೆ ಯುದ್ಧ ಮಾಡುವ ಹಾಡನ್ನು ಜೊತೆಗೆ ಕೋಟೆಯನ್ನು ಮುರಿಯುವ ಹಾಡು. ಆ ಬಳಿಕ ಭೈರವನ ಹಾಡು ನಂತರ ದೇವಿಯನ್ನು ಕುಣಿತದ ಸ್ಥಳಕ್ಕೆ ಕರೆದೊಯ್ಯುವ ಹಾಡು ಇವುಗಳೆಲ್ಲವನ್ನೂ ಕ್ರಮಬದ್ಧವಾಗಿ ಹಾಡುತ್ತಾರೆ.

**೬. ಗುರು – ಉಪದೇಶ:**

ಗೊಂದೋಲು ಪೂಜೆಯ ಪ್ರಕ್ರಿಯೆಯಲ್ಲಿ ಗುರು – ಉಪದೇಶ (ಗುರಿಮಾರಿಕೆ) ಇಲ್ಲದೆ ಯಾರು ಕೂಡಾ ಪೂಜಾ ಕಾರ್ಯದಲ್ಲಿ ಪಾತ್ರಿಯ ಸ್ಥಾನದಲ್ಲಿ ಭಾಗವಹಿಸುವಂತಿಲ್ಲ. ಗುರುಉಪದೇಶ ಕೊಡಲು ಉಪದೇಶ ಪಡೆಯುವವರ ತಂದೆ ಅಥವಾ ಕುಟುಂಬದ ಹಿರಿಯ ವ್ಯಕ್ತಿ ಗುರುಉಪದೇಶ ಇದ್ದವರು ಆಗಬೇಕು. ಅಥವಾ ಪೂಜೆಯ ಪೂಜಾರಿಯು ಕೂಡಾ ನೀಡುತ್ತಾರೆ. ಗುರುಉಪದೇಶ ನೀಡುವವರಿಗೆ ಪೂಜೆಯ ಸಂದರ್ಭದಲ್ಲಿ ವಿಶೇಷವಾಗಿ ಆಮಂತ್ರಣವನ್ನು ನೀಡುತ್ತಾರೆ. ಆ ಸಂದರ್ಭದಲ್ಲಿ ಗುರು ಉಪದೇಶಕ್ಕೆ ಬೇಕಾಗುವ ಸಾಮಾಗ್ರಿಗಳ ಪಟ್ಟಿಯನ್ನೂ ಕೂಡಾ ನೀಡಿರುತ್ತಾರೆ. ನಿಗದಿಪಡಿಸಿದ ಗೊಂದೋಲು ಪೂಜೆಯ ದಿನದಂದು ಉಪದೇಶ ಪಡೆಯುವ ವ್ಯಕ್ತಿ ಮೈ ಕೈಗೆ ಎಣ್ಣೆ ಹಚ್ಚಿ ಸ್ನಾನ ಮಾಡಿ ಸ್ವಲ್ಪ ಅಮೃತವನ್ನು ಪೂಜಾರಿಗೆ ನೀಡಿ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಬಿಳಿ ವಸ್ತ್ರದ ಒಂದು ತುದಿಯಲ್ಲಿ ತಾಂಬೂಲವನ್ನು ಮತ್ತೊಂದು ತುದಿಯಲ್ಲಿ ದಕ್ಷಿಣೆಯನ್ನು ಕಟ್ಟಿ ಗದ್ದುಗೆಯ ಹಿಂಬದಿಯಲ್ಲಿ ಅವರ ತೊಡೆಯಲ್ಲಿ ಕುಳಿತು ಗುರು ಉಪದೇಶ ಪಡೆಯುತ್ತಾರೆ. ಅವರ ತಲೆಯ ಮೇಲೆ ಬಿಳಿ ಬಟ್ಟೆ ಮುಚ್ಚಿದಾಗ ಗುರು ಉಪದೇಶದ ರಹಸ್ಯ ಮಂತ್ರವನ್ನು ನೀಡುವರು. ಒಂದೊಂದು ಮಂತ್ರವನ್ನು ಕಿವಿಯಲ್ಲಿ ಮೂರು ಭಾರಿ ಉಪದೇಶ ಮಾಡಿದ ಮೇಲೆ ಬಿಳಿ ವಸ್ತ್ರ ತೆಗೆದು, ಆ ಬಟ್ಟೆಯನ್ನು ಗುರುವಿನ ಹೆಗಲಿಗೆ ಹಾಕಿ ಕಾಲು ಮುಟ್ಟಿ ನಮಸ್ಕರಿಸುತ್ತಾನೆ. ಇನ್ನು ಇವರಿಗೆ ವಿಭೂತಿ ಹಾಕುವ ವಿಧಾನವನ್ನು ಗುರೂಪದೇಶ ಕೊಟ್ಟವರು ತಿಳಿಸಿ ಕೊಡುತ್ತಾರೆ. ಇದಾದ ಬಳಿಕ ಇವರಿಗೆ ಪಾತ್ರೆ ತೀರ್ಥವನ್ನು ಕುಡಿಯಲು ನೀಡುತ್ತಾರೆ. ನಂತರ ಗುರೂಪದೇಶ ಪಡೆದ ವ್ಯಕ್ತಿ ಮಂತ್ರವನ್ನು ರಹಸ್ಯವಾಗಿಟ್ಟು ನಿತ್ಯವೂ ವಿಭೂತಿಧಾರಣೆ ಮಾಡಿ ಮುಂದೆ ನಡೆಯಲಿರುವ ಗೊಂದೋಲು ಪೂಜೆಗಳಲ್ಲಿ ಪಾತ್ರಿಯವರಿಗೆ ಸಹಕರಿಸುವ ಸಂಪ್ರದಾಯ ಕಂಡು ಬಂದಿರುತ್ತದೆ. ಮರುದಿನ ಮಧ್ಯಾಹ್ನದವರೆಗೆ ಪೂಜಾರಿ ಮತ್ತಿತರರು ನಿಂತು ದೇವರ ಕಲಶವಿಟ್ಟ ಅಕ್ಕಿಯನ್ನು ಮತ್ತು ಕೋಳಿ ತಲೆಯ ಪದಾರ್ಥವನ್ನು ಹಾಗೂ ನೀರ್‌ದೋಸೆಯನ್ನು ಮಾಡಿ ಆ ಬಳಿಕ ಎಲ್ಲರೂ ಊಟ ಮಾಡಿ ಅವರವರ ಮನೆಗೆ ತೆರಳುವ ಪದ್ಧತಿ ಕಂಡುಬಂದಿರುತ್ತದೆ. ಇಲ್ಲಿಗೆ ಗೊಂದೋಲು ಪೂಜಾ ಕಾರ್ಯಕ್ರಮ ಕೊನೆಯಾಗುತ್ತದೆ.

**ಸಾಂಸ್ಕೃತಿಕ ಪದಕೋಶ**

- **ಬಾಳೆಗೊನೆ ಕಡಿಯುವುದು:** (ಬಾಳೆಗೊನೆ ಮುಹೂರ್ತ) ಗೊಂದೋಲು ಪೂಜೆಯು ನಿಗದಿತ ದಿನದಂದು ಬಾಳೆಗೊನೆ ಕಡಿಯುತ್ತಾರೆ. ಚಿಕ್ಕದಾಗಿ ಅಂಗಾರೆ ಪೂಜೆ ಅಥವಾ ಶುಕ್ರವಾರ ಗೊಂದೋಲು ಪೂಜೆ ನಡೆಯುವ ಸಂದರ್ಭದಲ್ಲಿ ಬಾಳೆಗೊನೆ ಕಡಿಯುವ ಕ್ರಮ ಇಲ್ಲ. ಆದರೆ ದೊಡ್ಡ ಪ್ರಮಾಣದಲ್ಲಿ ಪೂಜೆ ನಡೆಸುವುದಿದ್ದರೆ ಊರ ಮತ್ತು ಪರವೂರ ಭಕ್ತರನ್ನು ಸೇರಿಸಿ ಗೊಂದೋಲು ಪೂಜೆ ನಡೆಸುವುದಾದರೆ ಬಾಳೆಗೊನೆ ಕಡಿಯುವ ಕ್ರಮವಿದೆ. ಇದನ್ನು ತುಳುವಿನಲ್ಲಿ 'ಕೈಲು ಕಡ್ಪಿನಿ' ಇದುಪೂಜೆಯ ಆರಂಭಿಕಹಂತ ಈ ವಿಧಿಯನ್ನು ಏಳು ಅಥವಾ ಒಂಬತ್ತು ದಿನಗಳ ಮೊದಲು ಮಾಡುತ್ತಾರೆ. ಈ ದಿನದಂದು ಬಾಳೆಗೊನೆಯನ್ನು ತಂದು ಹಾಜರಿದ್ದವರೆಲ್ಲರೂ ಸೇರಿ ದೇವರೆದುರು ನಿಂತು ಪ್ರಾರ್ಥನೆಸಲ್ಲಿಸುತ್ತಾರೆ. ಹೀಗೆ ಗೊನೆ ಕಡಿದಮೇಲೆ ಪೂಜೆ ನಡೆಸುವ ಮನೆಯವರು

ಕೆಲವೊಂದು ವಿಧಿ ನಿಷೇದವನ್ನು ಆಚರಿಸಬೇಕಾಗುತ್ತದೆ. ಗೊನೆ ಕಡಿದ ದಿನದಿಂದ ಪೂಜೆ ನೆರವೇರಿಸುವ ತನಕ ಮನೆಯಲ್ಲಿ ಯಾವುದೇ ಸಮಾರಂಭಗಳನ್ನು ಇಟ್ಟುಕೊಳ್ಳಬಾರದು.

- ಗುರುಮಾರಿಕೆ ಅಂದರೆ ಗುರು ಉಪದೇಶ ಪಡೆದಿರುವ ವ್ಯಕ್ತಿಗಳೇ ಗೊಂದೋಳು ಪೂಜೆಯಲ್ಲಿ "ಭುತೆ"ಯರಾಗಿ ಭಾಗವಹಿಸಬಹುದು.
- **ಕುರ್ದಿ ನೀರು :** ತುಳುವಿನಲ್ಲಿ ಕುರಿನೀರು ಎಂದು ಕರೆಯುವರು. ಭೂತಾರಾಧನೆ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಒಂದು ಪಾತ್ರೆ / ತಂಬಿಗೆಯಲ್ಲಿ ನೀರು ಹಾಕಿ, ಆ ನೀರಿಗೆ ಹಳದಿ ಮತ್ತು ಸುಣ್ಣ ಹಾಕಿ ಕಲಕಿದಾಗ ಕುರ್ದಿನೀರು ತಯಾರಾಗುತ್ತದೆ.
- **ಪಾಯಿದ್:** ಗೊಂದೋಳು ಪೂಜೆ ಬಲಿ ನೀಡುವ ಹಂದಿ ಮತ್ತು ಕೋಳಿಗಳಿಗೆ, ಬಲಿ ನೀಡುವುದರ ಮುಂಚೆ ದೇವರನ್ನು ಪ್ರಾರ್ಥಿಸಿ, ಅಕ್ಷತೆ ಹಾಕಿ, ಆಹಾರ ನೀಡುವ ವಿಧಿಗೆ 'ಪಾಯಿದ್' ಎಂದು ಕರೆಯುವರು.
- **ಮೇಲ್ಕಾಪು :** ಗೊಂದೋಳು ಪೂಜೆಗೆ ಸಂಬಂಧಿಸಿ ಅಮ್ನೂರು / ಮಹಾಮಯಿ ದೇವರ ಪೀಠ / ಮಂಟಪದಲ್ಲಿ ಮೇಲ್ಭಾಗದಲ್ಲಿ ಬಿಳಿ ವಸ್ತ್ರ ಕಟ್ಟುತ್ತಾರೆ. ಇದಕ್ಕೆ ಮೇಲ್ಕಾಪು ಒಂದು ವೇಳೆ ಭೂತಗಳಿಗೆಯಾದರೆ ಕೊಡಿಯಡಿ ಎಂದು ಕರೆಯುವರು.
- **ಗದ್ದುಗೆ :** ಶ್ರೀ ಮಹಾಮ್ಮಾಯಿಯ ಮೂರ್ತಿ ಮತ್ತು ಮಂಟಪವನ್ನು ಸ್ವಲ್ಪ ಎತ್ತರದ ಸ್ಥಳದಲ್ಲಿಡುವುದಕ್ಕೆ ಗದ್ದುಗೆ ಎಂದು ಕರೆಯುವರು.

**ಕೊನೆ ಟಿಪ್ಪಣಿ:**

೧. ತಿಳುವಳಿಕೆದಾರರು ಶ್ರೀ ಸುನೀಲ್ ಭಟ್ ಪ್ರಧಾನ ಅರ್ಚಕರು ಶ್ರೀ ಕ್ಷೇತ್ರ ಗಣೇಶಪುರ ಕಾಟಪಳ್ಳ,

೨. ತಿಳುವಳಿಕೆದಾರರು ಶ್ರೀ ರಾಮಚಂದ್ರ ನಾಯ್ಕ ಅಡ್ಯಾರು, ಮಂಗಳೂರು.

೩. ತಿಳುವಳಿಕೆದಾರರು ಶ್ರೀ ಕೊರಗಪ್ಪ ನಿವೃತ್ತಾ ಪೊಲೀಸ್ ಅಧಿಕಾರಿ ಮಂಗಳೂರು.

೪. ತಿಳುವಳಿಕೆದಾರರು, ಶ್ರೀ ಸುಂದರ್ ಶೇಟ್ಟಿಗಾರ ಆಡಳಿತ ಮೋತ್ತೆಶ್ವರ ಶ್ರೀ ವೀರಭದ್ರ ದುರ್ಗಾಪರಮೇಶ್ವರಿ ದೇವಸ್ಥಾನ ಸೂರತ್ಕಲ್

೫. ತಿಳುವಳಿಕೆದಾರರು ಈ ಮೇಲಿನಂತೆ ಮಾಹಿತಿ ನೀಡಿರುತ್ತಾರೆ.

೬. ಕೈತಂಟೆ ನರಸಿಂಹ ಭಟ್, ಗೋಂದಳ ಪೂಜೆ, ಎ. ಕೃಷ್ಣ ಭಟ್ಟ (ಸಂ), ಸಂದರ್ಶನ ಅಭಿನಂದನಾ ಗ್ರಂಥ, ವಿಜಯ ಕಾಲೇಜು ಮುಲ್ಕಿ, ೧೯೭೭.

೭. ತಿಳುವಳಿಕೆದಾರರು, ರುಕ್ಮಯ ನಾಯ್ಕ (ಮಹಾಮಾಯಿ ದರ್ಶನ ಪಾತ್ರಿ) ಮತ್ತು ತೋಮನಾಯ್ಕ, ಎಡಪದವು – ಮಿಜಾಯ ಮಂಗಳೂರು ತಾಲೂಕು.

೮. ಅಣ್ಣಪ್ಪ ನಾಯ್ಕ ಚಾಂತಾರು ಮತ್ತು ರಮೇಶ ನಾಯ್ಕ ಪೇತ್ರಿ ಬ್ರಹ್ಮಾವರ